# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## (ಲೈಸೆನ್ಸ್ ನೀಡಿಕೆ) ವಿನಿಯಮಗಳು, 2004

ಅಧ್ಯಾಯ – I ಸಾಮಾನ್ಯ

ಅಧ್ಯಾಯ – II ಲೈಸೆನ್ಸ್

ಅಧ್ಯಾಯ – III ವಿವಾದಗಳ ಇತ್ಯರ್ಥ

ಅಧ್ಯಾಯ – IV ಸಂಕೀರ್ಣಗಳು

ನಮೂನೆ – 1 ಲೈಸೆನ್ಸ್ ಮಂಜೂರಾತಿಗಾಗಿ ಅರ್ಜಿ ನಮೂನೆ

ನಮೂನೆ – 2 ಪ್ರಸರಣ ಲೈಸೆನ್ಸುದಾರರಿಗೆ ಅನ್ವಯವಾಗುವ ಲೈಸೆನ್ಸ್‌ನ ಷರತ್ತುಗಳು

ನಮೂನೆ – 3 ವಿತರಣ ಲೈಸೆನ್ಸುದಾರರಿಗೆ ಅನ್ವಯವಾಗುವ ಲೈಸೆನ್ಸ್‌ನ ಷರತ್ತುಗಳು

ನಮೂನೆ – 4 ಮಾರಾಟದ ಲೈಸೆನ್ಸುದಾರರಿಗೆ ಅನ್ವಯವಾಗುವ ಲೈಸೆನ್ಸ್‌ನ ಷರತ್ತುಗಳು

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು

**ಅಧಿಸೂಚನೆ ಸಂಖ್ಯೆ ಡಿ/01/03 ದಿನಾಂಕ 4ನೆಯ ಡಿಸೆಂಬರ್ 2004**

**ಉದ್ದೇಶಗಳು ಮತ್ತು ಕಾರಣಗಳ ವಿವರಣೆ**

ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಅಧಿನಿಯಮ 36), ವಿದ್ಯುಚ್ಛಕ್ತಿ ಪ್ರಸರಣ, ವಿದ್ಯುಚ್ಛಕ್ತಿಯ ವಿತರಣ ಅಥವಾ ವಿದ್ಯುಚ್ಛಕ್ತಿ ಮಾರಾಟಕ್ಕಾಗಿ ಅಧಿನಿಯಮದ 14ನೆಯ ಪ್ರಕರಣದಂತೆ ಲೈಸೆನ್ಸ್ ನೀಡಿ ಪ್ರಾಧಿಕೃತಗೊಳಿಸದ ಅಥವಾ ಅಧಿನಿಯಮದ 13ನೆಯ ಪ್ರಕರಣದಂತೆ ವಿನಾಯಿತಿ ಪಡೆಯದ ಹೊರತು ಯಾವುದೇ ವ್ಯಕ್ತಿಯು ಆ ಕೆಲಸಗಳನ್ನು ಕೈಗೆತ್ತಿಕೊಳ್ಳುವಂತಿಲ್ಲವೆಂದು ಉದ್ದೇಶಿಸಿದೆ. ಆದಾಗ್ಯೂ ರದ್ದಾದ ನಿಯಮಗಳು ಅಥವಾ ನೇಮಕದ ದಿನಾಂಕಕ್ಕಿಂತ ಮುಂಚಿತವಾಗಿ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಧಿನಿಯಮದ ಉಪಬಂಧಗಳನ್ವಯ ವಿದ್ಯುಚ್ಛಕ್ತಿ ಪ್ರಸರಣ ಅಥವಾ ಸರಬರಾಜಿನ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಕರಣದಲ್ಲಿ ಮತ್ತು ಸರ್ಕಾರದ ಕಂಪನಿ ಅಥವಾ ಅಧಿನಿಯಮದ 131 (2) ನೆಯ ಪ್ರಕರಣದಲ್ಲಿ ಉಲ್ಲೇಖಿಸಿದ ಕಂಪನಿ ಅಥವಾ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳನುಸಾರ ರಚಿಸಿದ ಕಂಪನಿಗಳ ಪ್ರಕರಣದಲ್ಲಿ ಕೂಡ ಅವುಗಳನ್ನು ಅಧಿನಿಯಮಗಳ ಅನ್ವಯ ಲೈಸೆನ್ಸುದಾರರು ಎಂದು ಪರಿಭಾವಿಸತಕ್ಕದ್ದು. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ, 1999ವು, ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅನುಸೂಚಿಯಲ್ಲಿನ ಅಧಿನಿಯಮಗಳ ಪೈಕಿ ಒಂದಾಗಿದ್ದು, ಹಾಲಿಯಿರುವ ಪ್ರಸರಣ ಕಂಪನಿ ಮತ್ತು ವಿತರಣ ಕಂಪನಿಗಳು ಹಾಗೂ ಸಹಕಾರಿ ಸಂಘಗಳು ಲೈಸೆನ್ಸು ಪಡೆದಿವೆ ಎಂದು ಈ ಮೇಲೆ ಹೇಳಿರುವ ಉಪಬಂಧಗಳಂತೆ ಭಾವಿಸಲಾಗಿದೆ. ಅಧಿನಿಯಮದಂತೆ ರಾಜ್ಯ ಪ್ರಸರಣ ಸಂಸ್ಥೆಯು ಪ್ರಸರಣ ಲೈಸೆನ್ಸುದಾರನೆಂದು ಭಾವಿಸತಕ್ಕದ್ದಾಗಿದೆ. ಆಯೋಗವು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ಅಧಿನಿಯಮ 2003ರ 16ನೆಯ ಪ್ರಕರಣಕ್ಕೆ ಅಗತ್ಯವಾದ ಉಪಬಂಧಗಳಂತೆ ಕವಿನಿಆ (ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ಲೈಸೆನ್ಸ್‌ನ ಷರತ್ತುಗಳು) ವಿನಿಯಮಗಳು, 2004 ಅನ್ನು ಈಗಾಗಲೇ ಬಿಡುಗಡೆ ಮಾಡಿದೆ. ಅದರಂತೆ, ಆಯೋಗವು ಪ್ರಸರಣ ಕಂಪನಿಗೆ ಲೈಸೆನ್ಸಿನ ಷರತ್ತುಗಳನ್ನು ಬಿಡುಗಡೆಗೊಳಿಸಿದೆ. ಅಧಿನಿಯಮದ 15ನೆಯ ಪ್ರಕರಣದಂತೆ ಆಯೋಗವು, ಪರಿಭಾವಿತ ಲೈಸೆನ್ಸುದಾರರನ್ನು ಉಳಿದು ಇತರ ವ್ಯಕ್ತಿಗಳ ಪ್ರಕರಣದಲ್ಲಿ ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿ ಹಾಗೂ ನಮೂನೆಯನ್ನು ನಿರ್ದಿಷ್ಟಪಡಿಸತಕ್ಕದ್ದು. ಅಧಿನಿಯಮದ 16ನೆಯ ಪ್ರಕರಣದಂತೆ, ಆಯೋಗವು ಸಾಮಾನ್ಯ ಅಥವಾ ನಿರ್ದಿಷ್ಟವಾದ ಷರತ್ತುಗಳನ್ನು ನಿರ್ದಿಷ್ಟಪಡಿಸಬಹುದಾಗಿದೆ. ಅವುಗಳನ್ನು ಲೈಸೆನ್ಸುದಾರರು ಅಥವಾ ಲೈಸೆನ್ಸುದಾರರ ವರ್ಗಗಳಿಗೆ ಅನ್ವಯಿಸತಕ್ಕದ್ದು ಮತ್ತು ಅಂತಹ ಷರತ್ತುಗಳು ಅಂತಹ ಲೈಸೆನ್ಸಿನ ಷರತ್ತುಗಳಾಗುತ್ತವೆ ಎಂದು ಭಾವಿಸತಕ್ಕದ್ದು. ಆಯೋಗವು, ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳಿಗೆ ಲೈಸೆನ್ಸಿನ ಷರತ್ತುಗಳ ಮೇಲೆ ವಿನಿಯಮಗಳನ್ನು ಪ್ರತ್ಯೇಕವಾಗಿ ಬಿಡುಗಡೆಗೊಳಿಸಿದೆ. ಅವುಗಳಲ್ಲಿ ಲೈಸೆನ್ಸಿನ ಷರತ್ತುಗಳನ್ನು ಕವಿನಿಆ (ಲೈಸೆನ್ಸು ನೀಡಿಕೆ) ವಿನಿಯಮಗಳು, 2004ರಲ್ಲಿ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದೆಂದು ನಿರ್ದಿಷ್ಟಪಡಿಸಲಾಗಿದೆ.

ಲೈಸೆನ್ಸು ನೀಡಿಕೆ ಯೋಜನೆಯನ್ನು ರೂಪಿಸಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಕೆಳಗಿನ ಉದ್ದೇಶಗಳನ್ನು ಸಾಧಿಸುವ ಉದ್ದೇಶವಿಟ್ಟುಕೊಂಡಿರುತ್ತದೆ.

1. ಸ್ಪಷ್ಟವಾಗಿ ಪರಿಭಾಷಿಸಲಾದ ತಾಂತ್ರಿಕ ಗುಣಮಟ್ಟಗಳ ಅನುಸಾರವಾಗಿ ಮತ್ತು ಆದಷ್ಟು ಕಡಿಮೆ ದರದಲ್ಲಿ ಬಳಕೆದಾರರಿಗೆ ವಿದ್ಯುತ್ ಸರಬರಾಜು.
2. ಲೈಸೆನ್ಸುದಾರನು ಬಳಕೆದಾರರಿಗೆ ಜವಾಬ್ದಾರನಾಗಿರುವಿಕೆ.
3. ಸಾರ್ವಜನಿಕರಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲಿ ಲೈಸೆನ್ಸುದಾರನ ಪಾರದರ್ಶಕತೆ.
4. ಸ್ಪರ್ಧೆಗೆ ಉತ್ತೇಜನ.
5. ಸಾರ್ವತ್ರಿಕ ಸೇವೆಗೆ ಅವಕಾಶ.

## ವಿನಿಯಮಗಳು

ವಿದ್ಯುಚ್ಛಕ್ತಿ ಅಧಿನಿಯಮ, 2003 (2003ರ ಅಧಿನಿಯಮ 36) ರ ಪ್ರಕರಣ 181 ರಿಂದ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಆ ಸಂಬಂಧದಲ್ಲಿ ತನ್ನನ್ನು ಸಮರ್ಥಗೊಳಿಸುವಂತಹ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದಿನ ವಿನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಯಾವುವೆಂದರೆ.–

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಲೈಸೆನ್ಸು ನೀಡಿಕೆ) ವಿನಿಯಮಗಳು, 2004

### ಅಧ್ಯಾಯ – I

### ಸಾಮಾನ್ಯ

1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವ್ಯಾಪ್ತಿ :- (1) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಲೈಸೆನ್ಸು ನೀಡಿಕೆ) ವಿನಿಯಮಗಳು 2004 ಎಂದು ಕರೆಯಬಹುದು.

(2) ಅವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಅವು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತವೆ.

2. ಪರಿಭಾಷೆಗಳು :– (1) ಈ ವಿನಿಯಮಗಳಲ್ಲಿ ಸಂದರ್ಭಕ್ಕೆ ಅನ್ಯಥಾ ಅರ್ಥವಿಲ್ಲದ ಹೊರತು :–

ಎ. "ಅಧಿನಿಯಮ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಅಧಿನಿಯಮ, 2003

ಬಿ. "ಅಧ್ಯಕ್ಷರು" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರು.

ಸಿ. "ಆಯೋಗ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

ಡಿ. "ವಿತರಣಾ ಲೈಸೆನ್ಸುದಾರ" ಎಂದರೆ ತನ್ನ ಸರಬರಾಜು ಪ್ರದೇಶದಲ್ಲಿ ಗ್ರಾಹಕರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದಕ್ಕಾಗಿ ವಿತರಣಾ ಪದ್ಧತಿಯನ್ನು ಕಾರ್ಯಪಾಲನೆ ಗೊಳಿಸಿ ನಿರ್ವಹಿಸುವುದಕ್ಕೆ ಪ್ರಾಧಿಕೃತಗೊಂಡ ಲೈಸೆನ್ಸುದಾರ.

ಇ. "ಕರಡು ಲೈಸೆನ್ಸು" ಎಂದರೆ, ಅರ್ಜಿದಾರನು ಕೋರುವಂತಹ ಮಾರ್ಪಾಟುಗಳು ಮತ್ತು ಅದರ ವಿಭಿನ್ನತೆಯೊಂದಿಗೆ ಆಯೋಗಕ್ಕೆ ಸಲ್ಲಿಸಲಾದ ಈ ವಿನಿಯಮಗಳಿಗೆ ಅನುಬಂಧಿಸಲಾದ ನಮೂನೆ 1 ಅಥವಾ 2ರ ಪ್ರಕಾರ ಇರುವ ಲೈಸೆನ್ಸು ನಮೂನೆ.

ಎಫ್. ವಿದ್ಯುತ್ ವ್ಯಾಪಾರಗಾರ ಎಂದರೆ, ಅಧಿನಿಯಮದ 12ನೆಯ ಪ್ರಕರಣದಂತೆ ವಿದ್ಯುಚ್ಛಕ್ತಿ ವ್ಯಾಪಾರಕ್ಕಾಗಿ ಲೈಸೆನ್ಸಿನ ಮಂಜೂರಾತಿ ಪಡೆದ ಒಬ್ಬ ವ್ಯಕ್ತಿ.

ಜಿ. "ಸಾಮಾನ್ಯ ವಿನಿಯಮಗಳು" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಸಾಮಾನ್ಯ ಮತ್ತು ವ್ಯವಹರಣೆ ನಿರ್ವಹಣೆ) ವಿನಿಯಮಗಳು, 2000.

ಹೆಚ್. ಕ.ವಿ.ಸು. ಅಧಿನಿಯಮ ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999.

ಐ. "ಸದಸ್ಯ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಸದಸ್ಯ.

ಜೆ. "ಅಧಿಕಾರಿ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಅಧಿಕಾರಿ ಹಾಗೂ ಅದು ಕಾರ್ಯದರ್ಶಿಯನ್ನೂ ಒಳಗೊಳ್ಳತಕ್ಕದ್ದು.

ಕೆ. "ಸ್ವೀಕರಿಸುವ ಅಧಿಕಾರಿ" ಎಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಸಾಮಾನ್ಯ ಮತ್ತು ವ್ಯವಹರಣೆ ನಿರ್ವಹಣೆ) ವಿನಿಯಮಗಳು, 2000ದ ವಿನಿಯಮ 23ರ ಪ್ರಕಾರ ಆಯೋಗವು ನಿಯುಕ್ತಿ ಮಾಡಿದ ಅಧಿಕಾರಿ.

ಎಲ್. "ವಿನಿಯಮಗಳು" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ (ಲೈಸೆನ್ಸು ನೀಡಿಕೆ) ವಿನಿಯಮಗಳು, 2004.

ಎಂ. "ಕಾರ್ಯದರ್ಶಿ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿ.

ಎನ್. ವಿದ್ಯುಚ್ಛಕ್ತಿ ಸಂಬಂಧದಲ್ಲಿ 'ಸರಬರಾಜು' ಎಂದರೆ ಲೈಸೆನ್ಸುದಾರ ಅಥವಾ ಗ್ರಾಹಕನಿಗೆ ವಿದ್ಯುತ್ತಿನ ಮಾರಾಟ.

ಒ. ಮಾರಾಟ ಎಂದರೆ ವಿದ್ಯುಚ್ಛಕ್ತಿ ಮರುಮಾರಾಟಕ್ಕಾಗಿ ಅದರ ಖರೀದಿ ಹಾಗೂ ಮಾರಾಟ ಎಂಬ ಪದಕ್ಕೆ ಅದರಂತೆ ಅರ್ಥ ನೀಡತಕ್ಕದ್ದು.

ಪಿ. "ಮಾರಾಟ ಲೈಸೆನ್ಸುದಾರ" ಎಂದರೆ ವಿದ್ಯುಚ್ಛಕ್ತಿ ಮಾರಾಟ ಮಾಡುವುದಕ್ಕಾಗಿ ಆಯೋಗದಿಂದ ಒಬ್ಬ ಲೈಸೆನ್ಸುದಾರ.

ಕ್ಯು. "ಪ್ರಸರಣ ಲೈಸೆನ್ಸ್" ಎಂದರೆ ಪ್ರಸರಣದ ಒಂದು ನಿರ್ದಿಷ್ಟ ಪ್ರಸರಣ ಪ್ರದೇಶದಲ್ಲಿ ಹೆಚ್ಚಿನ ಹೆಚ್ಚಿನ ವೋಲ್ಟೇಜು ಪ್ರಸರಣ ಮಾರ್ಗಗಳ ಮೂಲಕವಾಗಲೀ ಸಂದರ್ಭಾನುಸಾರ ಹೆಚ್ಚಿನ ಹೆಚ್ಚಿನ ವೋಲ್ಟೇಜು ಪ್ರಸರಣ ಮಾರ್ಗಗಳನ್ನು ನಿರ್ವಹಣೆ ಮಾಡಲು ಮತ್ತು ಅಥವಾ ಹೆಚ್ಚಿನ ಹೆಚ್ಚಿನ ವೋಲ್ಟೇಜು ಮಾರ್ಗಗಳಲ್ಲಿ ವಿದ್ಯುಚ್ಛಕ್ತಿ ರವಾನಿಸಲು ಲೈಸೆನ್ಸು.

(2) ಈ ವಿನಿಯಮಗಳಲ್ಲಿ ಬಳಸಿರುವ ಹಾಗೂ ಮೇಲೆ ಪರಿಭಾಷಿಸದಿರುವ ಪದಗಳು ಅಥವಾ ಪದಾವಳಿಗಳು, ಕ.ವಿ.ಸು. ಅಧಿನಿಯಮ ಅಥವಾ ಅಧಿನಿಯಮಗಳಲ್ಲಿರುವ ಅರ್ಥವನ್ನೇ ಹೊಂದಿರತಕ್ಕದ್ದು, ಹಾಗೂ ಯಾವುದೇ ಅಸಂಗತೆ ಉಂಟಾದ ಪ್ರಕರಣದಲ್ಲಿ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು.

(3) ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದಾದಂತೆ, ಸಾಮಾನ್ಯ ವಿನಿಯಮಗಳು, ಪ್ರಾಯೋಗಿಕ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಯಥೋಚಿತ ಬದಲಾವಣೆಗಳೊಂದಿಗೆ ಈ ವಿನಿಯಮಗಳ ಮೇರೆಗಿನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ – II

## ಲೈಸೆನ್ಸು

3. ಕೆಲ ಪ್ರಕರಣಗಳಲ್ಲಿ ಲೈಸೆನ್ಸಿನ ಮಂಜೂರಾತಿ ಅಗತ್ಯವಿಲ್ಲ.

1) ಅಧಿನಿಯಮದ 14ನೆಯ ಪ್ರಕರಣದ ಉಪಬಂಧದಂತೆ ಲೈಸೆನ್ಸುದಾರನೆಂದು ಪರಿಭಾವಿತನಾಗಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಅಥವಾ ಮತ್ತು ಅಧಿನಿಯಮದಂತೆ ಲೈಸೆನ್ಸು ಪಡೆಯಬೇಕಾದ ಅಗತ್ಯವಿಲ್ಲ. ಆದಾಗ್ಯೂ, ಅಂತಹ ಲೈಸೆನ್ಸುದಾರನಿಗೆ ಅಧಿನಿಯಮದ 16ನೆಯ ಪ್ರಕರಣದ ಉಪಬಂಧಗಳಂತೆ ಆಯೋಗದಿಂದ ನಿಗದಿಯಾಗಿರುವ ಲೈಸೆನ್ಸಿನ ಷರತ್ತುಗಳು ಅನ್ವಯವಾಗತಕ್ಕದ್ದು.

2) ಆಯೋಗವು, ಸೂಕ್ತವಾದ ಸರ್ಕಾರವು ಪ್ರಕರಣ 3ರಂತೆ ರಚಿಸಿರುವ ರಾಷ್ಟ್ರೀಯ ನೀತಿಯನುಸಾರ ಮಾಡಿದ ಶಿಫಾರಸ್ಸಿನ ಮೇಲೆ ಹಾಗೂ ಸಾರ್ವಜನಿಕ ಹಿತಾಸಕ್ತಿಯಿಂದ ಅಧಿಸೂಚನೆ ಮೂಲಕ ಅಂತಹ ಷರತ್ತುಗಳು ಮತ್ತು ಮಿತಿ ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು ಮತ್ತು ಅಂತಹ ಅವಧಿ ಅಥವಾ ಅವಧಿಗಳಿಗಾಗಿ, ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಅಧಿನಿಯಮದ 12ನೆಯ ಪ್ರಕರಣದ ಉಪಬಂಧಗಳನ್ನು ಸ್ಥಳೀಯ ಪ್ರಾಧಿಕಾರ, ಪಂಚಾಯಿತಿ ಸಂಸ್ಥೆ, ಬಳಕೆದಾರರ ಸಂಘ, ಸಹಕಾರಿ ಸಂಘಗಳು, ಸರ್ಕಾರೇತರ ಸಂಸ್ಥೆಗಳು ಅಥವಾ ಹಕ್ಕು ಹೊಂದಿರುವವರಿಗೆ ಅನ್ವಯಿಸತಕ್ಕದ್ದಲ್ಲ.

3) ರಾಜ್ಯ ಸರ್ಕಾರ ಅಧಿಸೂಚಿಸಬಹುದಾದ ಗ್ರಾಮೀಣ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ ಮತ್ತು ವಿತರಣೆ ಮಾಡಲು ವ್ಯಕ್ತಿಯೊಬ್ಬರು ಉದ್ದೇಶಿಸಿದ್ದಲ್ಲಿ, ಅಂತಹ ವ್ಯಕ್ತಿಯೂ ಅಂತಹ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆಗೆ ಯಾವುದೇ ಲೈಸೆನ್ಸಿನ ಅಗತ್ಯವಿರುವುದಿಲ್ಲ. ಆದರೆ, ಅಧಿನಿಯಮದ 53ನೆಯ ಪ್ರಕರಣದಂತೆ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ನಿರ್ದಿಷ್ಟಪಡಿಸಬಹುದಾದ ಕ್ರಮಗಳನ್ನು ಆತನು ಪಾಲಿಸತಕ್ಕದ್ದು.

4) ಕ.ವಿ.ಸು. ಅಧಿನಿಯಮದ ಉಪಬಂಧಗಳಂತೆ ಆಯೋಗದಿಂದ ವಿದ್ಯುತ್ ಸರಬರಾಜು ಸಂಸ್ಥೆಯಾಗಿರುವ ಯಾವುದೇ ವ್ಯಕ್ತಿಗೆ ಲೈಸೆನ್ಸನ್ನು ಮಂಜೂರು ಮಾಡಿದ್ದಾಗ ಅಥವಾ ಅಧಿನಿಯಮದಂತೆ ಯಾವುದೇ ಇತರ ವ್ಯಕ್ತಿಗೆ ಆಯೋಗದಿಂದ ಲೈಸೆನ್ಸ್ ಪಡೆಯುವುದರಿಂದ ವಿನಾಯಿತಿ ನೀಡಿದ್ದಲ್ಲಿ, ಅಂತಹ ವ್ಯಕ್ತಿಯು ಅಧಿನಿಯಮದಂತೆ ಲೈಸೆನ್ಸ್ / ವಿನಾಯಿತಿಯಲ್ಲಿ ನಿರ್ದಿಷ್ಟಪಡಿಸಿದ ಅಂತಹ ಅವಧಿಗೆ ಮಂಜೂರಾತಿ ನೀಡಿದ್ದಲ್ಲಿ ಹೊಸ ಲೈಸೆನ್ಸ್ ಪಡೆಯಲು ಅರ್ಜಿ ಹಾಕಿ ಪಡೆಯುವ ಅಗತ್ಯವಿರತಕ್ಕದ್ದಲ್ಲ. ಆದರೆ, ಆಯೋಗವು ನಿರ್ದಿಷ್ಟಪಡಿಸಿರುವ ಲೈಸೆನ್ಸ್ / ವಿನಾಯಿತಿ ಷರತ್ತುಗಳು, ಅಧಿನಿಯಮದ ಉಪಬಂಧಗಳೊಂದಿಗೆ ಅಸಂಗತವಾಗದವರೆಗೆ ಲೈಸೆನ್ಸಿನ / ವಿನಾಯಿತಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಗಾಗಿ ಮುಂದುವರಿಯುವುದಕ್ಕೆ ಅನ್ವಯಿಸತಕ್ಕದ್ದು.

4. ಲೈಸೆನ್ಸು ಮಂಜೂರಾತಿಗಾಗಿ ಅರ್ಜಿ ಆಹ್ವಾನ.

1) ವಿದ್ಯುಚ್ಛಕ್ತಿ ಪ್ರಸರಣ, ವಿದ್ಯುಚ್ಛಕ್ತಿ ವಿತರಣ ಅಥವಾ ವಿದ್ಯುಚ್ಛಕ್ತಿ ವ್ಯಾಪಾರ ಕೈಗೆತ್ತಿಕೊಳ್ಳ ಬಯಸುವ ಈ ಮೇಲಿನ ಖಂಡ 1ರಲ್ಲಿ ನಿರ್ದಿಷ್ಟ ಪಡಿಸಿರುವುದಕ್ಕಿಂತ ಹೊರತಾದ ಯಾವುದೇ ವ್ಯಕ್ತಿ ಯಾರೇ ಇರಲಿ, ಅಧಿನಿಯಮದಂತೆ ಲೈಸೆನ್ಸ್ ಮಂಜೂರಾತಿಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

2) ಆಯೋಗವು, ಅದು ಅವಶ್ಯವೆನಿಸಿದರೆ, ಉಪಭೋಗದಾರ ಪಾರದರ್ಶಕತೆಯ ತತ್ವಗಳಿಗೆ ಖಾತರಿ ನೀಡುವ ಸಾರ್ವಜನಿಕ ಪ್ರಕಟಣೆಯನ್ನು ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಮೂಲಕ ಅಥವಾ ಆಯೋಗಕ್ಕೆ ಸೂಕ್ತವೆಂದು ಪರಿಗಣಿಸುವ ಇತರ ಯಾವುದೇ ರೀತಿಯಲ್ಲಿ ಸಂದರ್ಭಾನುಸಾರ ವಿದ್ಯುತ್ ಪ್ರಸರಣ, ವಿದ್ಯುತ್ ವಿತರಣೆ ಅಥವಾ ವಿದ್ಯುತ್ ವ್ಯಾಪಾರಕ್ಕೆಗೊಳ್ಳುವ ಲೈಸೆನ್ಸಿಗೆ ನೀಡಿಕೆಗೆ ಆಯೋಗವು ನಿರ್ದಿಷ್ಟ ಪಡಿಸಬಹುದಾದಂತಹ ಅರ್ಹತಾ ಅಗತ್ಯತೆಗಳನ್ನು ಪೂರೈಸುವಂತಹ ಸಂಭಾವ್ಯರಿಂದ ಅರ್ಜಿಗಳನ್ನು ಆಹ್ವಾನಿಸಬಹುದು.

3) ಸಾಮಾನ್ಯ ವಿನಿಯಮಗಳಲ್ಲಿ ನಿಗದಿಪಡಿಸಿರುವ ನಮೂನೆ – 1 ಮತ್ತು ನಮೂನೆ – 2 ದೊಂದಿಗೆ ಈ ವಿನಿಯಮಗಳ ಅನುಬಂಧದಲ್ಲಿರುವ ನಮೂನೆ – 1ರಲ್ಲಿ ಲೈಸೆನ್ಸಿನ ಮಂಜೂರಾತಿಗಾಗಿ ಪ್ರತಿ ಅರ್ಜಿ ಸಲ್ಲಿಸತಕ್ಕದ್ದು.

4) ಲೈಸೆನ್ಸಿಗಾಗಿ ಸಲ್ಲಿಸುವ ಪ್ರತಿ ಅರ್ಜಿಗೆ ಅರ್ಜಿದಾರರು ಅಥವಾ ಅರ್ಜಿದಾರನ ಪರವಾಗಿ ಸಹಿ ಹಾಕತಕ್ಕದ್ದು (ಇನ್ನು ಮುಂದೆ ಅರ್ಜಿದಾರ ಎಂದು ಕರೆಯಲಾಗಿದೆ) ಮತ್ತು ಆಯೋಗದ ಸ್ವೀಕರಿಸುವ ಅಧಿಕಾರಿಗೆ ವಿಳಾಸಕ್ಕೆ ಕಳುಹಿಸತಕ್ಕದ್ದು. ಅರ್ಜಿಯನ್ನು 6 ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು ಮತ್ತು ಪ್ರತಿಯೊಂದು ಪ್ರತಿಯ ಜೊತೆ ಈ ಮುಂದಿನವುಗಳು ಇರತಕ್ಕದ್ದು;

i) ಲೈಸೆನ್ಸಿನ ಕರಡು ಷರತ್ತುಗಳು

ii) ಅರ್ಜಿದಾರರ ವಿವರಗಳು ಮತ್ತು ಹಿನ್ನೆಲೆ

iii) ಪ್ರಸರಣ ಅಥವಾ ಸರಬರಾಜಿನ ಉದ್ದೇಶಿತ ಪ್ರದೇಶದ ಭೂಪಟಗಳು.

ಭೂಪಟಗಳ ಅಳತೆ ಪ್ರಮಾಣವು (ಎ) ಒಂದು ಕಿ.ಮೀ ಗೆ 10 ಸೆಂ. ಮೀ. ಅಥವಾ (ಬಿ) ವಿಷಯದ ಸಂದರ್ಭಾನುಸಾರ ಆಯೋಗವು ಅನುಮೋದಿಸಬಹುದಾದಂತಹ ಅಳತೆ ಪ್ರಮಾಣದಲ್ಲಿರತಕ್ಕದ್ದು.

iv) ಸರಬರಾಜು ಅಥವಾ ಪ್ರಸರಣ ಪ್ರದೇಶದ ಯಾವುದೇ ಭಾಗದ ಮೇಲೆ ಅಡಳಿತವನ್ನು ಹೊಂದಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳ ಪಟ್ಟಿ

v) ಲೈಸೆನ್ಸಿನ ಉದ್ದೇಶಕ್ಕಾಗಿ ಅರ್ಜಿದಾರನು ಅರ್ಜಿಸಲು ಉದ್ದೇಶಿಸಿರುವ ಯಾವುದೇ ಭೂಮಿಗಳನ್ನು ವಿವರಿಸುವ ಒಂದು ವಿವರಣಾ ಪತ್ರ ಮತ್ತು ಅಂತಹ ಅರ್ಜನೆಗೆ ಮಾರ್ಗಗಳು.

vi) ಲೈಸೆನ್ಸಿನ ನಿರ್ವಹಣಾ ಪ್ರದೇಶದಲ್ಲಿ ಖರ್ಚು ಮಾಡಲು ಉದ್ದೇಶಿಸಿರುವ ಬಂಡವಾಳದ ಅಂದಾಜು ಪಟ್ಟಿ ಮತ್ತು ಆಯೋಗಕ್ಕೆ ಬೇಕಾಗುವ ಅಂತಹ ಇತರ ವಿವರಗಳು.

vii) ಅರ್ಜಿದಾರನು ನಿಗಮಿತ ನಿಕಾಯವಾಗಿದ್ದರೆ, ಕಂಪನಿಯ ಸ್ಥಾಪನೆ ಮತ್ತು ನಿಯಮಾವಳಿ ಪತ್ರ ಮತ್ತು ಇತರ ಎಲ್ಲ ಸಂದರ್ಭಗಳಲ್ಲಿ ಅದೇ ಬಗೆಯ ರಚನಾ ದಸ್ತಾವೇಜುಗಳು ಅನ್ವಯವಾಗುವಲ್ಲೆಲ್ಲಾ ಹಿಂದಿನ ಮೂರು ವರ್ಷಗಳ ವಾರ್ಷಿಕ ಲೆಕ್ಕ ಪತ್ರಗಳ ಅಥವಾ ಅಗತ್ಯ ಪಡಿಸಬಹುದಾದ ಇತರ ಅದೇ ಬಗೆಯ ದಸ್ತಾವೇಜುಗಳ ಒಂದು ಪ್ರತಿ.

viii) ಅಧಿನಿಯಮದ 15ನೆಯ ಪ್ರಕರಣದಂತೆ ರಾಜ್ಯ ಸರ್ಕಾರದಿಂದ ನಿಗದಿಪಡಿಸಬಹುದಾದ ಫೀಜು.

xi) ಈ ಸಂಬಂಧದಲ್ಲಿ ಆದೇಶದ ಮೂಲಕ ಆಯೋಗವು ಕೋರಬಹುದಾದ ಅಂತಹ ಇತರ ದಸ್ತಾವೇಜುಗಳು/ಮಾಹಿತಿ.

5. ಅರ್ಜಿಯ ಸ್ವೀಕಾರ ಮತ್ತು ರಸೀದಿ :

ಲೈಸೆನ್ಸ್ ಮಂಜೂರಾತಿಗೆ ಅರ್ಜಿ ಸ್ವೀಕರಿಸಿದ ಮೇಲೆ, ಸ್ವೀಕರಿಸುವ ಅಧಿಕಾರಿಯು ಅದರ ವಿವರಗಳನ್ನು ಈ ಉದ್ದೇಶಕ್ಕಾಗಿ ನಿರ್ವಹಿಸಲಾಗಿರುವ ರಜಿಸ್ಟರಿನಲ್ಲಿ ನಮೂದಿಸ ತಕ್ಕದ್ದು ಮತ್ತು ಆ ಅರ್ಜಿಗೆ ಒಂದು ಉಲ್ಲೇಖ ಸಂಖ್ಯೆಯನ್ನು ನೀಡತಕ್ಕದ್ದು. ನಂತರ ಸ್ವೀಕರಿಸುವ ಅಧಿಕಾರಿಯು ಅರ್ಜಿದಾರನಿಗೆ, ಅರ್ಜಿಯಲ್ಲಿ ತಿಳಿಸಿರುವ ಸ್ವೀಕೃತಿಯ ದಿನಾಂಕ ಮತ್ತು ಉಲ್ಲೇಖ ಸಂಖ್ಯೆಯನ್ನು ತಿಳಿಸಿ ಒಂದು ಸ್ವೀಕೃತಿ ಪತ್ರವನ್ನು ರವಾನೆ ಮಾಡತಕ್ಕದ್ದು.

6. **ಸಾರ್ವಜನಿಕ ಪರಿವೀಕ್ಷಣೆಗಾಗಿ ಅರ್ಜಿ ಮತ್ತು ದಸ್ತಾವೇಜುಗಳು** : ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸಿದ ಒಂದು ವಾರದೊಳಗಾಗಿ, ಅರ್ಜಿದಾರನು ತನ್ನ ಕಾರ್ಯಾಲಯದಲ್ಲಿ ಮತ್ತು ಆತನ ಏಜೆಂಟರು (ಇದ್ದರೆ) ಅವರ ಕಾರ್ಯಾಲಯಗಳಲ್ಲಿ ಮತ್ತು ಪ್ರತಿಯೊಂದು ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ ಮತ್ತು/ಅಥವಾ ಪ್ರಸ್ತಾಪಿತ ಸರಬರಾಜು ಪ್ರದೇಶದ ಯಾವುದೇ ಭಾಗದ ಆಡಳಿತ ಹೊಂದಿರುವ ನಗರ ಸಭೆ ಮತ್ತು ಕಾಲಕಾಲಕ್ಕೆ ಆಯೋಗದಿಂದ ಗೊತ್ತು ಪಡಿಸಲಾಗುವಂತಹ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದಲ್ಲಿಯೂ, –

i) ಸಾರ್ವಜನಿಕ ಪರಿವೀಕ್ಷಣೆಗಾಗಿ ಅರ್ಜಿ ಮತ್ತು ಅದರೊಂದಿಗೆ ಸಲ್ಲಿಸಿರುವ ಎಲ್ಲ ದಸ್ತಾವೇಜುಗಳ 3 ಪ್ರತಿಗಳನ್ನು ಸಹ ಇರಿಸತಕ್ಕುದು ಮತ್ತು

ii) ಅರ್ಜಿದಾರನು, ಈ ಅರ್ಜಿಯ ಮತ್ತು ಅದರ ಲಗತ್ತುಗಳ ಮುದ್ರಿತ ಪ್ರತಿಗಳನ್ನು ಕೋರುವ ಎಲ್ಲಾ ವ್ಯಕ್ತಿಗಳಿಗೆ, ಅವುಗಳನ್ನು ಫೋಟೋ ಕಾಪಿ ಮಾಡಿಸಿ ಕೊಳ್ಳುವುದಕ್ಕೆ ತಗಲುವ ವೆಚ್ಚ ಪಡೆದು ಒದಗಿಸತಕ್ಕುದು.

7. ಅರ್ಜಿಯ ಪರಿಶೀಲನೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕೋರುವುದು.

1) ಅರ್ಜಿಯ ವಿವರಗಳನ್ನು ಅದಕ್ಕಾಗಿಯೇ ಇಟ್ಟಿರುವ ರಿಜಿಸ್ಟರಿನಲ್ಲಿ ನಮೂದಿಸಿದ ನಂತರ ಸ್ವೀಕರಿಸುವ ಅಧಿಕಾರಿಯು ಅರ್ಜಿಯನ್ನು ಆಯೋಗದ ಮುಂದೆ ಮಂಡಿಸತಕ್ಕದ್ದು.

2) ಅರ್ಜಿಯನ್ನು ಪರಿಶೀಲಿಸಿದ ನಂತರ ಆಯೋಗವು, ಅರ್ಜಿಯ ಬಗ್ಗೆ ವ್ಯವಹರಿಸುವ ಉದ್ದೇಶಕ್ಕೆ ಅವಶ್ಯವಿದೆಯೆಂದು ಪರಿಗಣಿಸುವಂತಹ ಹೆಚ್ಚಿನ ಮಾಹಿತಿಯನ್ನು ಅಥವಾ ವಿವರಗಳನ್ನು ಅಥವಾ ದಸ್ತಾವೇಜುಗಳನ್ನು ಗೊತ್ತುಪಡಿಸಲಾಗುವ ಅವಧಿಯೊಳಗಾಗಿ ಒದಗಿಸಲು ಅರ್ಜಿದಾರನನ್ನು ಅಗತ್ಯ ಪಡಿಸಬಹುದು.

8. ಅರ್ಜಿಯ ಅಂಗೀಕಾರ :–

ಆಯೋಗವು, ಅರ್ಜಿ ಮತ್ತು ಅದರ ಜೊತೆಗೆ ಇರುವ ದಸ್ತಾವೇಜುಗಳು ಎಲ್ಲಾ ರೀತಿಯಲ್ಲಿಯೂ ಪೂರ್ಣವಾಗಿವೆಯೆಂದು ನಿರ್ಣಯಿಸಿದಾಗ ಹಾಗೂ ಅರ್ಜಿದಾರನು ಅರ್ಜಿಯನ್ನು ಕ್ರಮಬದ್ಧವಾಗಿ ಸಲ್ಲಿಸಲು ಗೊತ್ತುಪಡಿಸಲಾದ ವಿಧಾನವನ್ನು ಅನುಸರಿಸಿದ್ದಾನೆಂದು ಕಂಡು ಬಂದ ನಂತರ, ಅಧ್ಯಕ್ಷರು, ಅಧಿನಿಯಮದಲ್ಲಿ ಹೇಳಿರುವ ಕಾರ್ಯ ವಿಧಾನಕ್ಕನುಗುಣವಾಗಿ ಲೈಸೆನ್ಸು ನೀಡಿಕೆಗೆ ಪರಿಗಣಿಸಲು ಅರ್ಜಿಯು ಸಿದ್ಧವಾಗಿದೆಯೆಂದು ಪ್ರಮಾಣೀಕರಿಸತಕ್ಕದು.

9. ಅರ್ಜಿಯ ಮತ್ತು ಅದರಲ್ಲಿನ ವಿಷಯಗಳ ಬಗ್ಗೆ ಜಾಹೀರಾತು.–

(1)(ಎ) ಅರ್ಜಿದಾರನು, ಅರ್ಜಿಯ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ತನ್ನ ಅರ್ಜಿಯ ಒಂದು ನೋಟೀಸನ್ನು ಲೈಸೆನ್ಸನ್ನು ಕೋರಿರುವ ಪ್ರದೇಶದಲ್ಲಿ ಪ್ರಸಾರದಲ್ಲಿರುವ ಎರಡು ಇಂಗ್ಲೀಷ್ ದಿನ ಪತ್ರಿಕೆಗಳು ಮತ್ತು ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕುದು:, ಈ ನೋಟಿಸಿನಲ್ಲಿ ಮುಂದಿನ ವಿವರಗಳು ಸಂಕ್ಷಿಪ್ತ ರೂಪದಲ್ಲಿರತಕ್ಕುದು.

1) ಅರ್ಜಿದಾರನ ಹೆಸರು;

2) ಲೈಸೆನ್ಸನ್ನು ಯಾವ ಪ್ರದೇಶಕ್ಕೆ ಕೋರಲಾಗಿದೆ;

3) ಅರ್ಜಿದಾರನು ಸಲ್ಲಿಸಿರುವ ಕರಡು ಲೈಸೆನ್ಸಿನ ಭೂಪಟಗಳ ಮತ್ತು ದಸ್ತಾವೇಜುಗಳ ಪ್ರತಿಗಳನ್ನು ಪರಿಶೀಲಿಸಬಹುದಾದ ಮತ್ತು ಕರಡು ಲೈಸೆನ್ಸಿನ ಪ್ರತಿಗಳನ್ನು ಖರೀದಿಸಬಹುದಾದ ವಿಳಾಸ

4) ಪ್ರಸ್ತಾವದ ಸಂಕ್ಷಿಪ್ತ ವಿವರಗಳು

(ಬಿ) ಆಯೋಗವು ಅನ್ಯಥಾ ನಿರ್ದಿಷ್ಟಪಡಿಸಿದ ಹೊರತು, ನೋಟೀಸನ್ನು, ದಿನಪತ್ರಿಕೆಗಳ ಕನಿಷ್ಠ ಎರಡು ನಿರಂತರ ಸಂಚಿಕೆಗಳಲ್ಲಿ ಪ್ರಕಟಿಸತಕ್ಕುದು. ಕರಡು ಲೈಸೆನ್ಸಿನ ಮೇಲು ಭಾಗದಲ್ಲಿ ಯಾವ ಶಿರೋನಾಮವನ್ನು ಕೊಡಲಾಗಿದೆಯೋ ಅದರ ಸಂಕ್ಷಿಪ್ತ ಹೆಸರನ್ನು ಜಾಹೀರಾತಿನ ಮೇಲ್ಭಾಗದಲ್ಲಿ ಕೊಡತಕ್ಕುದು. ಅರ್ಜಿಗೆ ಸಂಬಂಧಿಸಿದಂತೆ ಆಯೋಗಕ್ಕೆ ಯಾವುದೇ ನಿವೇದನೆ ಸಲ್ಲಿಸಬಯಸುವ ಪ್ರತಿಯೊಂದು ಪ್ರಾಧಿಕಾರವು, ಸಾರ್ವಜನಿಕ ಸೇವೆಯೊದಗಿಸುವ ಸಂಸ್ಥೆಗಳು (ಯುಟಿಲಿಟಿ) ಅಥವಾ ವ್ಯಕ್ತಿಯು, ಮೊದಲನೆ ಜಾಹೀರಾತು ನೀಡಿದ ದಿನಾಂಕದಿಂದ 30 ದಿನಗಳೊಳಗಾಗಿ ಒಂದು ಪತ್ರದ ಮೂಲಕ ಸ್ವೀಕರಿಸುವ ಅಧಿಕಾರಿಯವರ ವಿಳಾಸಕ್ಕೆ ಸಲ್ಲಿಸಬಹುದೆಂದು ನೋಟೀಸಿನಲ್ಲಿ ತಿಳಿಸತಕ್ಕುದು.

2) ಅರ್ಜಿದಾರನ ವೆಬ್‌ಸೈಟಿನಲ್ಲಿ, ಸೂಚನೆಯ ಪ್ರತಿ ಮತ್ತು ಲೈಸೆನ್ಸಗಾಗಿ ಸಲ್ಲಿಸಿದ ಅರ್ಜಿಯ ಜೊತೆಯಲ್ಲಿ ಲಗತ್ತಿಸಿದ ದಸ್ತಾವೇಜುಗಳೂ ಲಭ್ಯವಿರುವಂತೆ ಮಾಡಬೇಕು.

(2) ಅಲ್ಲದೆ, ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಯಾವುದೇ ಸ್ಥಳೀಯ ಪ್ರಾಧಿಕಾರದ, ಅಥವಾ ಇತರ ಯಾರೇ ನಾಮ ನಿರ್ದಿಷ್ಟ ಪ್ರತಿನಿಧಿಗೆ ಅಥವಾ ಯೋಗ್ಯವೆಂದು ಆಯೋಗವು ಭಾವಿಸಬಹುದಾದಂತಹ ವ್ಯಕ್ತಿಗೆ ಅಥವಾ ಸಂಸ್ಥೆಗೆ ಅರ್ಜಿಯ ನೋಟೀಸನ್ನು ಜಾರಿಮಾಡಬೇಕೆಂದು ಆಯೋಗವು ನಿರ್ದೇಶಿಸಬಹುದು.

(3) ರಾಜ್ಯದೊಳಗೆ ಪ್ರಸರಣ ಲೈಸೆನ್ಸುದಾರನಾಗಿ ಕಾರ್ಯನಿರ್ವಹಿಸಲು ಉದ್ದೇಶಿಸಿರುವ ವ್ಯಕ್ತಿಯು ಕೂಡಲೇ ಅರ್ಜಿ ಸಲ್ಲಿಸಿ, ಅಂತಹ ಅರ್ಜಿಯ ಪ್ರತಿಯನ್ನು ರಾಜ್ಯಪ್ರಸರಣ ಸಂಸ್ಥೆಗೆ ಕಳುಹಿಸತಕ್ಕದ್ದು.

10. ಕರಡು ಲೈಸೆನ್ಸಿನ ತಿದ್ದುಪಡಿ :- ಕರಡು ಲೈಸೆನ್ಸಿನಲ್ಲಿ ಯಾವುದೇ ತಿದ್ದುಪಡಿ ಮಾಡಬೇಕೆಂದು ಬಯಸುವ ಯಾರೇ ವ್ಯಕ್ತಿಯು, ವಿನಿಯಮ 9 (1) (1) ರನ್ವಯ ಉಲ್ಲೇಖಿಸಲಾದ ಮೊದಲ ಜಾಹೀರಾತಿನ ದಿನಾಂಕದಿಂದ 45 ದಿನಗಳೊಳಗಾಗಿ ತಿದ್ದುಪಡಿಯ ವಿವರಣ ಪತ್ರವನ್ನು ಅರ್ಜಿದಾರನಿಗೆ ಮತ್ತು ಸ್ವೀಕರಿಸುವ ಅಧಿಕಾರಿಗೆ ತಲುಪಿಸತಕ್ಕದ್ದು.

11. ಆಕ್ಷೇಪಣೆಗಳು ಮತ್ತು ಸಲಹೆಗಳು :- 1) ಲೈಸೆನ್ಸು ನೀಡಿಕೆಗೆ ಆಕ್ಷೇಪಿಸಬಯಸುವ ಯಾರೇ ವ್ಯಕ್ತಿಯು, ಮೊದಲ ಜಾಹೀರಾತು ನೀಡಿದ ದಿನಾಂಕದಿಂದ 30 ದಿನಗಳೊಳಗಾಗಿ, ಶಪಥ ಪತ್ರದ (ಅಫಿಡವಿಟ್) ಮೂಲಕ ತನ್ನ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು ಮತ್ತು ಅಂಥ ಆಕ್ಷೇಪಣೆಗಳ ಪ್ರತಿಯನ್ನು ಅರ್ಜಿದಾರನಿಗೆ ಜಾರಿ ಮಾಡುವ ಬಗ್ಗೆ ರುಜುವಾತನ್ನು ಅದಕ್ಕೆ ಲಗತ್ತಿಸಿರತಕ್ಕದ್ದು. ಆಕ್ಷೇಪಣೆಗಳನ್ನು ಸ್ವೀಕರಿಸುವ ಅಧಿಕಾರಿಯ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಥ ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ, ಸ್ವೀಕರಿಸುವ ಅಧಿಕಾರಿಯು, ಅದರ ಮೇಲೆ ಸಂಬಂಧಿಸಿದ ಲೈಸೆನ್ಸನ್ನು ಅರ್ಜಿಯ ಉಲ್ಲೇಖ ಸಂಖ್ಯೆಯ ಮುದ್ರೆಯೊತ್ತತಕ್ಕದ್ದು ಮತ್ತು ಸಂಬಂಧಿಸಿದ ಲೈಸೆನ್ಸಿಗೆ ಸೇರಿದ ಕಡತದಲ್ಲಿ ಅಂಥ ಆಕ್ಷೇಪಣೆಗಳನ್ನು ಸೇರಿಸತಕ್ಕದ್ದು.

2) ರಾಜ್ಯ ಪ್ರಸರಣ ಸಂಸ್ಥೆಯು ಮೇಲೆ 9(3) ಕಂಡಿಕೆಯಲ್ಲಿ ಉಲ್ಲೇಖಿಸಿದ ಅರ್ಜಿಯ ಪ್ರತಿ ಸ್ವೀಕರಿಸಿದ 30 ದಿನಗಳೊಳಗಾಗಿ ಶಿಫಾರಸ್ಸುಗಳೇನಾದರೂ ಇದ್ದಲ್ಲಿ ಆಯೋಗಕ್ಕೆ ಕಳುಹಿಸತಕ್ಕದ್ದು. ಪರಂತು, ಅಂತಹ ಶಿಫಾರಸ್ಸುಗಳಿಗೆ ಆಯೋಗ ಬದ್ಧವಾಗಿರಬೇಕಿಲ್ಲ.

12. ಆಕ್ಷೇಪಣೆ ಇಲ್ಲ ಪ್ರಮಾಣ ಪತ್ರ (ನಿರಾಕ್ಷೇಪಣ ಪತ್ರ) .- ಸರಬರಾಜು ಲೈಸೆನ್ಸು ಅಥವಾ ಪ್ರಸರಣ ಲೈಸೆನ್ಸು ಕೋರಿರುವಂಥ ಪ್ರದೇಶವು ಯಾವುದೇ ದಂಡು ಪ್ರದೇಶದ, ವಿಮಾನ ನಿಲ್ದಾಣದ, ಸೈನಿಕ ಲಕ್ಷಾವರಣದ, ಶಸ್ತ್ರಾಗಾರದ, ನೌಕಾಂಗಣದ ಅಥವಾ ಕ್ಯಾಂಪಿನ ಅಥವಾ ರಕ್ಷಣಾ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದ ವಶದಲ್ಲಿರುವ ಯಾವುದೇ ಕಟ್ಟಡದ ಅಥವಾ ಸ್ಥಳದ ಇಡೀ ಭಾಗವನ್ನು ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುವುದಿದ್ದರೆ, ಅರ್ಜಿದಾರನು ಆ ಪ್ರದೇಶದಲ್ಲಿ ವಿದ್ಯುತ್ ಪ್ರಸರಣ ಅಥವಾ ಸರಬರಾಜಿಗೆ, ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅವಶ್ಯಕ ಆಕ್ಷೇಪಣೆ ಇಲ್ಲ (ನಿರಾಕ್ಷೇಪಣ ಪತ್ರ) ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು ಮತ್ತು ಲೈಸೆನ್ಸು ನೀಡುವುದಕ್ಕೆ ಮುಂಚೆ ಪ್ರಮಾಣ ಪತ್ರವನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು.

13. ಸ್ಥಳೀಯ ವಿಚಾರಣೆಗಳು ಮತ್ತು ಅಹವಾಲು ಕೇಳಿಕೆಗಳು.- (1) ದಸ್ತಾವೇಜುಗಳ ಸಲ್ಲಿಕೆ, ಅನುಮತಿಗಳನ್ನು ಪಡೆಯುವಿಕೆ ಮತ್ತು ಸೂಚನೆಗಳ ಪ್ರಕಟಣೆಗಳಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳನ್ನು ಅರ್ಜಿದಾರನು ಪೂರೈಸಿದ ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲು ಅವಧಿ ಮುಗಿದ ನಂತರ, ಆಯೋಗವು, ಅರ್ಜಿಯನ್ನು ನಿಯತ ವಿಚಾರಣೆಗಾಗಿ ಗೊತ್ತುಪಡಿಸಬಹುದು.

(2) ಆಯೋಗವು ವಿಚಾರಣೆಯ ಅಥವಾ ಅಹವಾಲು ಕೇಳಿಕೆ ನೋಟೀಸನ್ನು, ಅರ್ಜಿದಾರನಿಗೆ, ಆಕ್ಷೇಪಣೆಗಳನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ, ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರಕ್ಕೆ ಹಾಗೂ ಆಯೋಗಕ್ಕೆ ಸೂಕ್ತವೆನಿಸುವಂಥ ಇತರ ಪ್ರಾಧಿಕಾರಕ್ಕೆ, ವ್ಯಕ್ತಿಗೆ ಅಥವಾ ಸಂಸ್ಥೆಗೆ ನೀಡತಕ್ಕದ್ದು.

(3) (ಎ) ಅಧಿನಿಯಮದ ಮೇರೆಗೆ ಕೋರಿರುವ ಲೈಸೆನ್ಸು ನೀಡಿಕೆಗೆ ಯಾರೇ ವ್ಯಕ್ತಿಯು ಆಕ್ಷೇಪಿಸಿದರೆ, ಆಯೋಗವು, ತನಗೆ ಅವಶ್ಯವೆಂದು ಪರಿಗಣಿಸಿದಲ್ಲಿ ಸ್ಥಳೀಯ ಪರಿಶೀಲನೆ ಮಾಡಿಸತಕ್ಕದ್ದು ಹಾಗೂ ಈ ಬಗ್ಗೆ ಒಂದು ಲಿಖಿತ ನೋಟೀಸನ್ನು ಅರ್ಜಿದಾರ ಹಾಗೂ ಆಕ್ಷೇಪಣೆದಾರರಿಬ್ಬರಿಗೂ ನೀಡತಕ್ಕದ್ದು.

(ಬಿ) ಅಂಥ ಸ್ಥಳೀಯ ಪರಿಶೀಲನೆಯನ್ನು ಆದೇಶಿಸಿ ನಡೆಸಿದಲ್ಲಿ, ಮಾಡಲಾದ ಸ್ಥಳೀಯ ಪರಿಶೀಲನೆಯ ಫಲಿತಾಂಶದ ಒಂದು ನಿವೇದನಾ ಪತ್ರ ಸಿದ್ಧಪಡಿಸತಕ್ಕದ್ದು ಮತ್ತು ಅದಕ್ಕೆ ಅರ್ಜಿದಾರನು, ಅಧಿಕಾರಿಯು ಅಥವಾ ಆ ಉದ್ದೇಶಕ್ಕೆ ನಿಯಮಿಸಿದ ವ್ಯಕ್ತಿಯು ಮತ್ತು ಆಯೋಗವು ನಿರ್ದೇಶಿಸಬಹುದಾದಂತಹ ಇತರ ವ್ಯಕ್ತಿಯು ಸಹಿ ಮಾಡತಕ್ಕದ್ದು.

14. ಅರ್ಜಿ ಬಗ್ಗೆ ಅಹವಾಲು ಕೇಳಿಕೆ.- (1) ಅರ್ಜಿಯ ಬಗ್ಗೆ ಅಹವಾಲು ಕೇಳಿಕೆಯ ರೀತಿಯನ್ನು ಸ್ಥಳವನ್ನು, ದಿನಾಂಕವನ್ನು ಮತ್ತು ಸಮಯವನ್ನು ಆಯೋಗವು ನಿರ್ಧರಿಸಬಹುದು.

2) ಲೈಸೆನ್ಸು ನೀಡಿಕೆಗಾಗಿ ಅರ್ಜಿಯ ಬಗ್ಗೆ ಅಹವಾಲು ಕೇಳಿಕೆಯನ್ನು ಸಾಮಾನ್ಯ ವಿನಿಯಮಗಳ ಅಧ್ಯಾಯ 2ರಲ್ಲಿ ಹೇಳಿರುವಂತೆ ನಡೆಸತಕ್ಕುದು.

15. ಕರಡು ಲೈಸೆನ್ಸಿನ ಅನುಮೋದನೆ.– (1) ಲೈಸೆನ್ಸ್ ಮಂಜೂರಾತಿಗಾಗಿ ಅರ್ಜಿ ಸ್ವೀಕರಿಸಿದ 90 ದಿನಗಳೊಳಗಾಗಿ, ಆದಷ್ಟು ಪ್ರಾಯೋಗಿಕವಾಗಿ ಆಯೋಗವು ವಿಚಾರಣೆ (ಯಾವುದಾದರೂ ಇದ್ದರೆ) ಮತ್ತು ವ್ಯವಹರಣೆಗಳ ನಂತರ, ಆಯೋಗವು ಲೈಸೆನ್ಸು ನೀಡಲು ಅಥವಾ ನಿರಾಕರಿಸಲು ನಿರ್ಣಯಿಸಬಹುದು ಹಾಗೂ ಅದು ಲೈಸೆನ್ಸು ನೀಡಲು ನಿರ್ಧರಿಸಿದಲ್ಲಿ ಅದು ಕರಡು ಲೈಸೆನ್ಸನ್ನು, ಅಂಥ ಮಾರ್ಪಾಡುಗಳೊಂದಿಗೆ, ಬದಲಾವಣೆಗಳೊಂದಿಗೆ ಅಥವಾ ಸೇರ್ಪಡೆಗಳೊಂದಿಗೆ ಮತ್ತು ಆಯೋಗವು ನಿರ್ದೇಶಿಸುವಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅನುಮೋದಿಸಬಹುದು. ಅಥವಾ ಕಾಲಕಾಲಕ್ಕೆ ಜಾರಿಯಲ್ಲಿರುವ ಅಧಿನಿಯಮ ಅಥವಾ ನಿಯಮಗಳು ಅಥವಾ ವಿನಿಯಮಗಳ ಉಪಬಂಧಗಳಿಗೆ ಅನುರೂಪವಾಗಿಲ್ಲದ ಅಂತಹ ಅಂಶಗಳ ತಿರಸ್ಕರಣೆಗೆ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ತಿರಸ್ಕರಿಸಬಹುದು. ಪರಂತು, ಅರ್ಜಿಯ ಬಗೆಗೆ ವಿಚಾರಣೆ ನಡೆಸುವ ಅವಕಾಶ ನೀಡದ ಹೊರತು ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(2) ಲೈಸೆನ್ಸ್‌ಗೆ ಮಂಜೂರಾತಿ ನೀಡಲು ಆಯೋಗವು ನಿರ್ಧರಿಸಿದಾಗ, ಅದು ಅಂತಹ ಮಾರ್ಪಾಡು, ಬದಲಾವಣೆಗಳು ಅಥವಾ ಸೇರ್ಪಡೆಗಳು ಮತ್ತು ಆಯೋಗ ನಿರ್ದೇಶಿಸಬಹುದಾದಂತೆ ಅಂತಹ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಕರಡು ಲೈಸೆನ್ಸ್‌ಗೆ ಅನುಮೋದನೆ ನೀಡಬಹುದಾಗಿದೆ.

3) ಕರಡು ಲೈಸೆನ್ಸನ್ನು ಅದರ ಮೂಲ ರೂಪದಲ್ಲಾಗಲಿ ಅಥವಾ ಮಾರ್ಪಾಡು ರೂಪದಲ್ಲಾಗಲಿ ಆಯೋಗವು ಅನುಮೋದಿಸಿದಾಗ ಸ್ವೀಕರಿಸುವ ಅಧಿಕಾರಿಯು, 14 ದಿನಗಳೊಳಗಾಗಿ ಅಂತಹ ಅನುಮೋದನೆಯನ್ನು ಹಾಗೂ ಅದು ಯಾವ ರೂಪದಲ್ಲಿ ಲೈಸೆನ್ಸು ನೀಡಲು ಉದ್ದೇಶಿಸಿದೆ ಹಾಗೂ ಲೈಸೆನ್ಸು ನೀಡಿಕೆಗೆ ಅರ್ಜಿದಾರನು ಪೂರೈಸಬೇಕಾದ ಷರತ್ತುಗಳನ್ನು ಅರ್ಜಿದಾರನಿಗೆ ತಿಳಿಸತಕ್ಕುದು.

4) ಆಯೋಗವು ಲೈಸೆನ್ಸು ನೀಡಲು ನಿರಾಕರಿಸಿದಲ್ಲಿ, ಸ್ವೀಕರಿಸುವ ಅಧಿಕಾರಿಯು ಅಂತಹ ನಿರಾಕರಿಸುವಿಕೆಗೆ ಸಮರ್ಥನೆಗಾಗಿ ಆಯೋಗ ಪ್ರತಿಯನ್ನು ಲಗತ್ತಿಸಿ ಅಂತಹ ನಿರಾಕರಣೆಯನ್ನು 14 ದಿನಗಳೊಳಗಾಗಿ ಅರ್ಜಿದಾರನಿಗೆ ತಿಳಿಸತಕ್ಕುದು.

16. ಲೈಸೆನ್ಸು ನೀಡಿಕೆಯ ಅಧಿಸೂಚನೆ :

1) ಆಯೋಗವು ಅನುಮೋದಿಸಿ ರೂಪದಲ್ಲಿ ಲೈಸೆನ್ಸನ್ನು ಒಪ್ಪಿಕೊಳ್ಳಲು ತಾನು ಇಚ್ಛಿಸಿದ್ದನೆಂಬ ಬಗ್ಗೆ ಅರ್ಜಿದಾರನಿಂದ ಒಂದು ಲಿಖಿತ ಸೂಚನೆಯನ್ನು ಸ್ವೀಕರಿಸಿ ಮತ್ತು ಲೈಸೆನ್ಸು ನೀಡಿಕೆಗೆ ನಿರ್ದಿಷ್ಟಪಡಿಸಲಾದ ಷರತ್ತುಗಳು ಅರ್ಜಿದಾರರಿಗೆ ಪೂರೈಕೆಯಾಗಿದ್ದರೆ, ನಂತರ ಲೈಸೆನ್ಸನ್ನು ಅಥವಾ ಆಯೋಗವು ತನಗೆ ಸೂಕ್ತವೆನಿಸುವಂತೆ ಪರಿಗಣಿಸಿದಂತೆ ಅದರ ಭಾಗ ಅಥವಾ ಸಾರಾಂಶವನ್ನು ಇಂಗ್ಲಿಷ್ ಮತ್ತು ಕನ್ನಡ ದಿನ ಪತ್ರಿಕೆಗಳ ಎರಡು ಸಂಚಿಕೆಗಳಲ್ಲಿ ಪ್ರಕಟಿಸುವಂತೆ ಅರ್ಜಿದಾರನಿಗೆ ಆಯೋಗವು ನಿರ್ದೇಶಿಸಬಹುದು.

2) ಆಯೋಗವು ಕೂಡಲೇ ಲೈಸೆನ್ಸನ್ನು ನೀಡಿ, ಲೈಸೆನ್ಸನ ಪ್ರತಿಯನ್ನು ರಾಜ್ಯ ಸರ್ಕಾರ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಸ್ಥಳೀಯ ಪ್ರಾಧಿಕಾರ ಮತ್ತು ಆಯೋಗ ಅಗತ್ಯವೆಂದು ಪರಿಗಣಿಸಿದಂತಹ ಇತರ ವ್ಯಕ್ತಿಗೆ ರವಾನಿಸತಕ್ಕದ್ದು.

17. ಲೈಸೆನ್ಸ್ ಪ್ರಾರಂಭದ ದಿನಾಂಕ ಮತ್ತು ಅವಧಿ.

ಅಧಿನಿಯಮ ಮತ್ತು ಈ ವಿನಿಯಮಗಳ ಅನುಸಾರ ಬಿಡುಗಡೆ ಮಾಡಿದ ಅವುಗಳಲ್ಲಿ ನಿರ್ದಿಷ್ಟ ಪಡಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಹಾಗೂ ಅಧಿನಿಯಮದ 19ನೆಯ ಪ್ರಕರಣದ ಉಪಬಂಧಗಳೊಂದಿಗೆ ಆಯೋಗದಿಂದ ಈ ಮೊದಲು ರದ್ದು ಪಡಿಸದ ಹೊರತು, ಅಧಿನಿಯಮದ 15ನೆಯ ಪ್ರಕರಣಗಳ (8)ನೆಯ ಉಪಪ್ರಕರಣದಂತೆ ನಿಗದಿಪಡಿಸಿದ ಅವಧಿ ಜಾರಿಯಲ್ಲಿರತಕ್ಕದ್ದು.

18. ಲೈಸೆನ್ಸಿನ ಅವಧಿಯ ವಿಸ್ತರಣೆ

ಅನ್ಯಥಾ, ಆಯೋಗವು ಬರವಣಿಗೆಯಲ್ಲಿ ನಿರ್ದಿಷ್ಟಪಡಿಸಿದ ಹೊರತು, ಲೈಸೆನ್ಸಿನ ಅವಧಿ ವಿಸ್ತರಣೆಗಾಗಿ ಅರ್ಜಿಯೊಂದರೊಡನೆ ವ್ಯವಹರಿಸುವಾಗ ಲೈಸೆನ್ಸ್ ಮಂಜೂರಾತಿ ವ್ಯವಹರಣೆಗಳನ್ನು ಅನುಸರಿಸತಕ್ಕದ್ದು.

19. ಭೂಪಟಗಳನ್ನು ಸಲ್ಲಿಸುವುದು

ಲೈಸೆನ್ಸನ್ನು ಮಂಜೂರಾತಿ ಮಾಡಿದಾಗ, ಅಂತಹ ಲೈಸೆನ್ಸಿಗೆ ಸಂಬಂಧಪಟ್ಟ ಭೂಪಟಗಳ ಮೂರು ಸೆಟ್‌ಗಳಿಗೆ ಮತ್ತು ವಿನಿಯಮ 3(2)ರಲ್ಲಿ ನಿರ್ದಿಷ್ಟಪಡಿಸಿರುವ ವಿವರಗಳಿಗೆ ಸಹಿ ಹಾಕತಕ್ಕುದು ಮತ್ತು ಅವು ಲೈಸೆನ್ಸು ನೀಡಿಕೆ ಅಧಿಸೂಚನೆ ದಿನಾಂಕಕ್ಕೆ ಸಂವಾದಿಯಾದ ದಿನಾಂಕ ಹೊಂದಿರತಕ್ಕುದು. ಭೂಪಟಗಳ ಒಂದು ಸೆಟ್ ಅನ್ನು ಆಯೋಗದಲ್ಲಿ ಇಟ್ಟಿರತಕ್ಕದ್ದು ಹಾಗೂ ಉಳಿದ ಎರಡು ಸೆಟ್‌ಗಳನ್ನು ಲೈಸೆನ್ಸುದಾರನಿಗೆ ನೀಡತಕ್ಕುದು.

20. ಮುದ್ರಿತ ಪ್ರತಿಗಳ ಸಂಗ್ರಹ.–

(1) ಯಾವ ವ್ಯಕ್ತಿಗೆ ಲೈಸೆನ್ಸು ಮಂಜೂರಾಗಿದೆಯೋ, ಆ ಪ್ರತಿ ವ್ಯಕ್ತಿಯು ಮಂಜೂರಾದ ಮೂವತ್ತು ದಿನಗಳೊಳಗಾಗಿ,

(ಎ) ಲೈಸೆನ್ಸಿನ ಸಾಕಷ್ಟು ಪ್ರತಿಗಳನ್ನು ಮುದ್ರಿಸಿ ಇಟ್ಟುಕೊಂಡಿರಬೇಕು.

(ಬಿ) ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿರುವ ಸರಬರಾಜು ಪ್ರದೇಶವನ್ನು ತೋರಿಸುವ ಸಾಕಷ್ಟು ಸಂಖ್ಯೆಯ ಭೂಪಟಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿರಬೇಕು.

(ಸಿ) ಆತನ ಕಾರ್ಯಾಲಯದಲ್ಲಿ, ಆತನ ಸ್ಥಳೀಯ ಕಾರ್ಯಾಲಯಗಳಲ್ಲಿ (ಯಾವುದಾದರೂ ಇದ್ದರೆ) ಹಾಗೂ ಸರಬರಾಜು ಪ್ರದೇಶದೊಳಗಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ ಕಛೇರಿಯಲ್ಲಿ ಎಲ್ಲಾ ಯುಕ್ತ ಸಮಯದಲ್ಲಿ ಸಾರ್ವಜನಿಕ ಪರಿವೀಕ್ಷಣೆಗಾಗಿ ಅಂಥ ಲೈಸೆನ್ಸು ಮತ್ತು ಭೂಪಟಗಳ ಪ್ರತಿಗಳನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡತಕ್ಕುದು.

(2) ಮೇಲೆ ಹೇಳಲಾದ ಮೂವತ್ತು ದಿನಗಳೊಳಗಾಗಿ ಅಂಥ ಪ್ರತಿಯೊಬ್ಬ ಲೈಸೆನ್ಸುದಾರನು, ಲೈಸೆನ್ಸು ಮತ್ತು ಸುಸಂಗತ ಭೂಪಟಗಳ ಒಂದು ಪ್ರತಿಯನ್ನು, ಸರಬರಾಜು ಪ್ರದೇಶದೊಳಗಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ಉಚಿತವಾಗಿ ನೀಡತಕ್ಕುದು ಮತ್ತು ಲೈಸೆನ್ಸಿನ ಮುದ್ರಿತ ಪ್ರತಿಗಳನ್ನು, ಅದಕ್ಕಾಗಿ ಅರ್ಜಿ ಸಲ್ಲಿಸಿ ಕೋರುವ ಎಲ್ಲಾ ವ್ಯಕ್ತಿಗಳಿಗೆ, ಪ್ರತಿಯೊಂದು ಪ್ರತಿಯನ್ನು ಫೋಟೋ ಕಾಪಿ ತೆಗೆಸುವುದಕ್ಕೆ ಮಾಡಿಕೆಯಂತೆ ಎಷ್ಟು ವೆಚ್ಚ ತಗಲಬಹುದೋ ಅದಕ್ಕೆ ಮೀರದ ಬೆಲೆಗೆ ಮುದ್ರಿತ ಪ್ರತಿಗಳನ್ನು ಮಾರಲು ಸೂಕ್ತ ವ್ಯವಸ್ಥೆ ಮಾಡತಕ್ಕುದು.

21. ಲೆಕ್ಕಪತ್ರಗಳನ್ನು ಸಿದ್ಧಪಡಿಸುವಿಕೆ ಮತ್ತು ಸಲ್ಲಿಸುವಿಕೆ.– 1) ಪ್ರತಿಯೊಬ್ಬ ಲೈಸೆನ್ಸುದಾರನು, ತಾನು ನಿರ್ವಹಿಸಿದ ಕಾರ್ಯಗಳ ಬಗ್ಗೆ ಲೆಕ್ಕಪತ್ರಗಳನ್ನು ಪ್ರತಿ ವರ್ಷದ ಮಾರ್ಚ್ ಮೂವತ್ತೊಂದನೇ ದಿನಾಂಕದವರೆಗೆ ಮಾಡಿಸಿರತಕ್ಕುದು.

2. ಅಂಥ ಲೈಸೆನ್ಸುದಾರನು ಅಧಿನಿಯಮದ ಪ್ರಕಾರ ಮೇಲೆ ಹೇಳಲಾದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಅಥವಾ ಆಯೋಗವು, ಲೈಸೆನ್ಸುದಾರನ ನಿಯಂತ್ರಣಕ್ಕೆ ಮೀರಿದ ಯಾವುದೇ ಕಾರಣಕ್ಕಾಗಿ ಅನುಮತಿಸಲಾದ ಅವಧಿಯು ಸಾಕಷ್ಟಿಲ್ಲವೆಂಬುದಾಗಿ ತನಗೆ ಮನದಟ್ಟಾದ ನಂತರ, ಅದು ಅನುಮತಿಸುವಂಥ ವಿಸ್ತರಿತ ಅವಧಿಯಲ್ಲಿ, ತನ್ನ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವನ್ನು ಸಿದ್ಧಪಡಿಸಿ ಮತ್ತು ಆಯೋಗವು ನಿರ್ದೇಶಿಸುವಷ್ಟು ಸಂಖ್ಯೆಯ ಪ್ರತಿಗಳಲ್ಲಿ ಸಲ್ಲಿಸತಕ್ಕುದು.

3. ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ಆಯೋಗವು ನಿರ್ದೇಶಿಸುವಂಥ ನಮೂನೆಯಲ್ಲಿ ಸಲ್ಲಿಸತಕ್ಕುದು. ಆ ಎಲ್ಲಾ ನಮೂನೆಗಳಿಗೆ ಲೈಸೆನ್ಸುದಾರ ಅಥವಾ ಆತನ ವಿದ್ಯುತ್ತ ಅಧಿಕಾರ ಪಡೆದ ಏಜೆಂಟ್ ಮತ್ತು ಅದರಲ್ಲಿ ಸೇರಿಸಬೇಕಾದ ವಿಷಯಗಳ ನಿಜವಾದ ಹಾಗೂ ನ್ಯಾಯಯುತವಾದವುಗಳೆಂದು ದೃಢೀಕರಿಸುವ ಚಾರ್ಟರ್ಡ್ ಅಕೌಂಟೆಂಟ್ ಸಹಿ ಹಾಕತಕ್ಕುದು.

4. ಆಯೋಗವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ, ಉಪವಿನಿಯಮ (3)ರಲ್ಲಿ ನಿರ್ದಿಷ್ಟಪಡಿಸಿರುವ ನಮೂನೆಗಳಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾಪತ್ರವನ್ನು ಸಲ್ಲಿಸುವುದರ ಜೊತೆಗೆ ಲೈಸೆನ್ಸುದಾರನು, ಆಯೋಗಕ್ಕೆ ಅಥವಾ ಈ ಸಂಬಂಧದಲ್ಲಿ ಅದು ಗೊತ್ತುಪಡಿಸುವಂಥ ಇತರ ಪ್ರಾಧಿಕಾರಕ್ಕೆ, ಆ ಉದ್ದೇಶಕ್ಕಾಗಿ ಆಯೋಗಕ್ಕೆ ಅಗತ್ಯವಿರುವಂತಹ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಲು ನಿರ್ದೇಶಿಸಬಹುದು.

22. ವಿದ್ಯುತ್ ಸರಬರಾಜು ಮತ್ತು ವಿದ್ಯುತ್ ಸಿಸ್ಟಮ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಮತ್ತು ವಿದ್ಯುತ್ ಸರಬರಾಜು ಮಾರ್ಗಗಳ ಬಗ್ಗೆ ಮಾದರಿ ಷರತ್ತುಗಳು.–

1) (i) ಲೈಸೆನ್ಸುದಾರನು, ವಿದ್ಯುತ್ ಸರಬರಾಜು ಮತ್ತು ಪವರ್ ಸಿಸ್ಟಮ್ ಮತ್ತು ವಿದ್ಯುತ್ ಸರಬರಾಜು ಮಾರ್ಗಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಮಾದರಿ ಷರತ್ತುಗಳನ್ನು ಮತ್ತು ಆಯೋಗವು ಈ ಬಗ್ಗೆ ತನಗೆ ಸಲ್ಲಿಸಲಾದ ಅರ್ಜಿಯ ಮೇಲೆ ಅನುಮತಿಸಬಹುದಾದಂಥ ಬದಲಾವಣೆಯೊಂದಿಗೆ, ಒಂದು ಆದೇಶದ ಮೂಲಕ ಕಾಲಕಾಲಕ್ಕೆ ಆಯೋಗವು ರೂಪಿಸುವ ಇತರ ಸಂಹಿತೆಗಳು ಮತ್ತು ಮಾನಕಗಳನ್ನು ಅಳವಡಿಸಿಕೊಳ್ಳತಕ್ಕುದು.

(ii) ಲೈಸೆನ್ಸುದಾರನು, ವಿದ್ಯುತ್ ಸರಬರಾಜು ಮತ್ತು ಪವರ್ ಸಿಸ್ಟಮ್ ಕಾರ್ಯಾಚರಣೆ ಮತ್ತು ನಿರ್ವಹಣೆ ಮತ್ತು ವಿದ್ಯುತ್ ಸರಬರಾಜು ಲೈನುಗಳ ಮಾದರಿ ಷರತ್ತುಗಳ ಸಾಕಷ್ಟು ಮುದ್ರಿತ ಪ್ರತಿಗಳನ್ನು ತನ್ನ ಕಛೇರಿಯಲ್ಲಿ ಯಾವಾಗಲೂ ಇಟ್ಟಿರತಕ್ಕುದು ಮತ್ತು ಅಂಥ ಪ್ರತಿಯನ್ನು ಕೋರಿದ ಯಾರೇ ವ್ಯಕ್ತಿಗೆ ಮೂಲಬೆಲೆಗೆ ಅದನ್ನು ಮಾರತಕ್ಕುದು.

23. ಲೈಸೆನ್ಸಿನ ಷರತ್ತುಗಳು

1) ಆಯೋಗವು, ಯಾವುದೇ ಸಾಮಾನ್ಯ ಅಥವಾ ನಿರ್ದಿಷ್ಟ ಷರತ್ತುಗಳನ್ನು ಲೈಸೆನ್ಸುದಾರ ಅಥವಾ ಲೈಸೆನ್ಸುದಾರ ವರ್ಗಗಳಿಗೆ ನಿಗದಿಪಡಿಸಬಹುದಾಗಿದೆ ಮತ್ತು ಅಂತಹ ಷರತ್ತುಗಳು ಅಂತಹ ಲೈಸೆನ್ಸಿನ ಷರತ್ತುಗಳೆಂದು ಪರಿಭಾವಿಸತಕ್ಕದ್ದು.

2) ಅಧಿನಿಯಮದ 14ನೆಯ ಪ್ರಕರಣದಂತೆ ಪ್ರಸರಣ ಲೈಸೆನ್ಸದಾರರೆಂದು ಪರಿಭಾವಿತವಾಗಿರುವ ಯಾವುದೇ ವ್ಯಕ್ತಿಯೂ ಸೇರಿದಂತೆ, ಪ್ರಸರಣ ಲೈಸೆನ್ಸುದಾರರಿಗೆ ಅನ್ವಯವಾಗುವ ಲೈಸೆನ್ಸಿನ ಷರತ್ತುಗಳನ್ನು ಈ ವಿನಿಯಮಗಳಿಗೆ ಲಗತ್ತಿಸಿರುವ ನಮೂನೆ – 2 ರಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

3) ವಿತರಣ ಲೈಸೆನ್ಸುದಾರರೆಂದು ಪರಿಭಾವಿತರಾಗಿರುವ ಯಾವುದೇ ವ್ಯಕ್ತಿ ಸೇರಿದಂತೆ ವಿತರಣ ಲೈಸೆನ್ಸುದಾರರಿಗೆ ಅನ್ವಯವಾಗುವ ಲೈಸೆನ್ಸಿನ ಷರತ್ತುಗಳು ಈ ವಿನಿಯಮಗಳಲ್ಲಿರುವ ನಮೂನೆ – 3 ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಇರತಕ್ಕದ್ದು.

4) ಈ ವಿನಿಯಮಗಳ ಅನುಬಂಧದಲ್ಲಿರುವ ನಮೂನೆ – 3ರಲ್ಲಿ ನಿಗದಿಪಡಿಸಿರುವಂತೆ ವಿದ್ಯುತ್ ವ್ಯಾಪಾರ ಮಾಡುವ ಯಾವುದೇ ವ್ಯಕ್ತಿಗೆ ಅನ್ವಯವಾಗುವ ಲೈಸೆನ್ಸಿನ ಷರತ್ತುಗಳು ಇರತಕ್ಕದು.

24. ಲೈಸೆನ್ಸನ ತಿದ್ದುಪಡಿ.

1) ಆಯೋಗದ ಅಭಿಪ್ರಾಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ದಿಸೆಯಲ್ಲಿ ಹಾಗೆ ಅನುಮತಿಸಿದಲ್ಲಿ, ಲೈಸೆನ್ಸುದಾರರು ಅಥವಾ ಇನ್ನಾರಾದರೂ ಅಂತಹ ಮಾರ್ಪಾಟುಗಳನ್ನು ಹಾಗೂ ಆತನ ಲೈಸೆನ್ಸಿನ ನಿಬಂಧನ ಮತ್ತು ಷರತ್ತುಗಳಿಗೆ ತಿದ್ದುಪಡಿ ಮಾಡಬೇಕೆಂಬ ಅರ್ಜಿಯು ಅರ್ಹವೆಂದು ಭಾವಿಸಿದಲ್ಲಿ ಆಯೋಗವು ಮಾಡಬಹುದಾಗಿದೆ. ಪರಂತು, ಆಯೋಗದ ಅಭಿಪ್ರಾಯದಲ್ಲಿ ಆ ಕಾರಣವಾಗಿ ತಡೆಹಿಡಿಯಲಾಗಿದೆ ಎಂಬ ಅಂತಹ ಸಮ್ಮತಿಯ ಅನ್ಯಥಾ ಲೈಸೆನ್ಸುದಾರರ ಸಮ್ಮತಿಯೊಂದಿಗೆ ಹೊರತುಪಡಿಸಿ ಅಂತಹ ಮಾರ್ಪಾಡುಗಳು ಅಥವಾ ತಿದ್ದುಪಡಿಗಳನ್ನು ಮಾಡತಕ್ಕದ್ದಲ್ಲ.

2) ಲೈಸೆನ್ಸುದಾರನು ಅಧಿನಿಯಮದ 18ನೆಯ ಪ್ರಕರಣದಂತೆ ಲೈಸೆನ್ಸಿನ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ, ಅರ್ಜಿದಾರನು ಅಂತಹ ಅರ್ಜಿಯನ್ನು ಸಲ್ಲಿಸಿದ ಏಳು ದಿನಗಳೊಳಗಾಗಿ ತಿದ್ದುಪಡಿ ಕೋರಿರುವ ಲೈಸೆನ್ಸು ಯಾವ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿರುವುದೋ ಆ ಪ್ರದೇಶದಲ್ಲಿ ಪ್ರಸಾರದಲ್ಲಿರುವ ಎರಡು ಇಂಗ್ಲಿಷ್ ಮತ್ತು ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಅಂಥ ಅರ್ಜಿಯ ಒಂದು ನೋಟೀಸ್‌ನ್ನು ಪ್ರಕಟಿಸತಕ್ಕದು, ಅದರಲ್ಲಿ ಈ ಕೆಳಗಿನ ವಿವರ ನೀಡತಕ್ಕದ್ದು.

ಎ) ಈಗಿರುವ ಲೈಸೆನ್ಸಿನ ಸಂಕ್ಷಿಪ್ತ ವಿವರಗಳು

ಬಿ) ಚಾಲ್ತಿಯಲ್ಲಿರುವ ಲೈಸೆನ್ಸಿಗೆ ಉದ್ದೇಶಿತ ತಿದ್ದುಪಡಿಗಳು ಮತ್ತು ತಿದ್ದುಪಡಿ ಕೋರುವುದಕ್ಕೆ ಸಂಕ್ಷಿಪ್ತ ಕಾರಣಗಳು.

3) ಆಯೋಗವು, ನೋಟೀಸಿನ ಮೊದಲ ಪ್ರಕಟಣೆಗೆ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಗಳನ್ನು ಪರಿಗಣಿಸಿದ ಹೊರತು ಯಾವುದೇ ಮಾರ್ಪಾಡು ಅಥವಾ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ.

4) ಆಯೋಗವು ತಾನಾಗಿಯೇ ತಿದ್ದುಪಡಿ ಮಾಡಲು ಉದ್ದೇಶಿಸಿದಾಗ, ಲೈಸೆನ್ಸು ಯಾವ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿರುವುದೋ ಆ ಪ್ರದೇಶದಲ್ಲಿ ಪ್ರಸಾರದಲ್ಲಿರುವ ಎರಡು ಇಂಗ್ಲಿಷ್ ಮತ್ತು ಎರಡು ಕನ್ನಡ ದಿನಪತ್ರಿಕೆಗಳಲ್ಲಿ ಆಯೋಗವು ತನಗೆ ಸೂಕ್ತವೆನಿಸುವಂತಹ ವಿವರಗಳನ್ನು ನೀಡಿ ಒಂದು ನೋಟೀಸನ್ನು ಪ್ರಕಟಿಸತಕ್ಕದ್ದು, ಆಯೋಗವು, ಉದ್ದೇಶಿತ ತಿದ್ದುಪಡಿಯ ಬಗೆಗೆ ಬಂದ ಎಲ್ಲಾ ಆಕ್ಷೇಪಣೆಗಳನ್ನು ಸೂಚನೆಯ ಮೊದಲ ಪ್ರಕಟಣೆಯ ದಿನದಿಂದ 30 ದಿನಗಳೊಳಗೆ ಸ್ವೀಕರಿಸಿದಲ್ಲಿ ಅವುಗಳನ್ನು ಪರಿಗಣಿಸತಕ್ಕದ್ದು.

5) ಲೈಸೆನ್ಸು ನೀಡಿಕೆಗೆ ಸಂಬಂಧಿಸಿದ ಉಪಬಂಧಗಳು, ಸಾಧ್ಯವಾದ ಮಟ್ಟಿಗೆ ವ್ಯವಹಾರಿಕ ಮತ್ತು ಅವಶ್ಯವಿರುವಷ್ಟರ ಮಟ್ಟಿಗೆ ಲೈಸೆನ್ಸು ತಿದ್ದುಪಡಿ ಕುರಿತ ಅರ್ಜಿಯ ಪರಿಶೀಲನೆ ಮತ್ತು ವಿಲೇವಾರಿಗೆ ಅನ್ವಯವಾಗತಕ್ಕದು.

6) ಯಾವುದೇ ದಂಡು ಪ್ರದೇಶ ಅಥವಾ ಅದರ ಯಾವುದೇ ಭಾಗ, ವಿಮಾನ ನಿಲ್ದಾಣ, ಕೋಟೆ, ಆಯುಧಶಾಲೆ, ನೌಕಾನೆಲೆ ಅಥವಾ ಶಿಬಿರ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳಗಳು ಪೂರ್ಣವಾಗಿ ಅಥವಾ ಯಾವುದೇ ಭಾಗವು ಒಳಗೊಂಡಂತೆ ರಕ್ಷಣಾ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದ ವಶದಲ್ಲಿದ್ದಲ್ಲಿ, ಆಯೋಗವು ಕೇಂದ್ರ ಸರ್ಕಾರದ ಸಮ್ಮತಿ ಪಡೆಯದ ಹೊರತು ಯಾವುದೇ ಬದಲಾವಣೆ ಅಥವಾ ಮಾರ್ಪಾಡುಗಳನ್ನು ಮಾಡತಕ್ಕದ್ದಲ್ಲ.

## ಅಧ್ಯಾಯ – III

## ವಿವಾದಗಳ ಮಧ್ಯಸ್ಥ ನಿರ್ಣಯ

25. ಮಧ್ಯಸ್ಥಿಕೆ

1) ಲೈಸೆನ್ಸುದಾರರ ಲೈಸೆನ್ಸಿನಲ್ಲಿ ಅನ್ಯಥಾ ಸ್ಪಷ್ಟಪಡಿಸಿದ ಹೊರತು, ಅಧಿನಿಯಮದಂತೆ ಅಥವಾ ಅಧಿನಿಯಮದಿಂದ ಯಾವುದೇ ವಿಷಯವು ಮಧ್ಯಸ್ಥಿಕೆಯ ಮೂಲಕ ನಿರ್ಧರಿಸಬೇಕೆಂದು ನಿರ್ದೇಶಿತವಾಗಿದ್ದಲ್ಲಿ, ಉಭಯ ಪಕ್ಷಕಾರರ ಯಾರೊಬ್ಬರ ಅರ್ಜಿಯ ಮೇರೆಗೆ ಅಂತಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಆಯೋಗವು ನಾಮಕರಣ ಮಾಡಬಹುದಾಗಿದೆ.

ಆದರೆ, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಉಪಬಂಧಗಳಿಗೊಳಪಟ್ಟು ಮಧ್ಯಸ್ಥಿಕೆ ಗೌರವಾನ್ವಿತವಾಗುತ್ತದೆ.

2) ಆಯೋಗವು, ಯಾವುದೇ ಲೈಸೆನ್ಸುದಾರರು ಅಥವಾ ಉತ್ಪಾದನಾ ಕಂಪನಿಗಳಿಗೆ ಸಂಬಂಧಿಸಿದ ಅರ್ಜಿಯ ಮೇಲೆ ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳ ನಡುವಿನ ವಿವಾದಗಳ ನ್ಯಾಯ ನಿರ್ಣಯಿಸುವುದು ಅಥವಾ ಯಾವುದೇ ವಿವಾದವನ್ನು ಮಧ್ಯಸ್ಥಿಕೆಗಾಗಿ ಒಪ್ಪಿಸಬೇಕು.

3) ಆಯೋಗವು, ಸಂಬಂಧಿಸಿದ ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳಿಗೆ ಕಾರಣ ಕೇಳಿ ನೋಟೀಸ್ ನೀಡಿ, ಅದರಲ್ಲಿ ನಮೂದಿಸಿದಂತೆ ಲೈಸೆನ್ಸುದಾರರು ಅಥವಾ ವಿಷಯಗಳ ನಡುವಿನ ವಿವಾದವನ್ನು ಮಧ್ಯಸ್ಥಿಕೆ ಮೂಲಕ ಏಕೆ ನ್ಯಾಯ ನಿರ್ಣಯಿಸಬಾರದು ಮತ್ತು ಇತ್ಯರ್ಥಗೊಳಿಸಬಾರದು ಎಂದು ಸೂಚನೆ ನೀಡತಕ್ಕದ್ದು.

4) ಆಯೋಗವು ನೋಟೀಸುಗಳನ್ನು ನೀಡಲಾಗಿರುವ ಲೈಸೆನ್ಸುದಾರರ ವಾದವನ್ನು ಆಲಿಸಿದ ನಂತರ ಹಾಗೂ ಉದ್ದೇಶಿತ ಮಧ್ಯಸ್ಥ ನಿರ್ಣಯದ ವಿರುದ್ಧ ಯಾವುದೇ ಕಾರಣವನ್ನು ಅಥವಾ ಸಮರ್ಥನೆಯನ್ನು ತೋರಿಸಿಲ್ಲವೆಂದು ಮನದಟ್ಟಾದರೆ, ಆಯೋಗವು ಅಥವಾ ಆಯೋಗವು ನಾಮ ನಿರ್ದೇಶನ ಮಾಡಿದ ವ್ಯಕ್ತಿಯ ಅಥವಾ ವ್ಯಕ್ತಿಗಳ ಮೂಲಕ ನ್ಯಾಯ ನಿರ್ಣಯ ಮತ್ತು ಇತ್ಯರ್ಥಕ್ಕಾಗಿ ವಿವಾದಗಳನ್ನು ಅಥವಾ ವಿಷಯಗಳನ್ನು ಒಪ್ಪಿಸಬೇಕೆಂದು ನಿರ್ದೇಶಿಸಿ ಆದೇಶ ಹೊರಡಿಸತಕ್ಕದ್ದು.

5) ನ್ಯಾಯ ನಿರ್ಣಯ/ಮಧ್ಯಸ್ಥಿಕೆಗಾಗಿ ಆಯೋಗಕ್ಕೆ ಒಪ್ಪಿಸಿದ ವಿಷಯಗಳಲ್ಲಿ ನ್ಯಾಯ ನಿರ್ಣಯ/ಮಧ್ಯಸ್ಥಿಕೆ ನಡೆಯುವ ಸ್ಥಳವು ಆಯೋಗದ ಕಚೇರಿಯಿರುವ ಸ್ಥಳ ಅಥವಾ ಆಯೋಗವು ನಿರ್ಧರಿಸಬಹುದಾದ ಯಾವುದೇ ಇತರ ಸ್ಥಳದಲ್ಲಿ ನಡೆಯಬಹುದಾಗಿದೆ.

26. ಮಧ್ಯಸ್ಥಗಾರರ ನಾಮ ನಿರ್ದೇಶನ

1) ಆಯೋಗದ ಹೊರತಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಮಧ್ಯಸ್ಥ ನಿರ್ಣಯಕ್ಕಾಗಿ ವಿಷಯವನ್ನು ವಹಿಸಲು ಆಯೋಗವು ತೀರ್ಮಾನಿಸಿದಲ್ಲಿ, ಅದನ್ನು –

   ಎ) ವಿವಾದದ ಪಕ್ಷಕಾರರು ಮಧ್ಯಸ್ಥಗಾರರ ಹೆಸರಿನ ಬಗ್ಗೆ ಸಮ್ಮತಿಸಿದಲ್ಲಿ ಒಬ್ಬರೇ ಮಧ್ಯಸ್ಥಗಾರನಿಗೆ ವಹಿಸತಕ್ಕದ್ದು.

   ಬಿ) ಪಕ್ಷಕಾರರು ಮಧ್ಯಸ್ಥಗಾರನ ಹೆಸರಿನ ಬಗ್ಗೆ ಒಪ್ಪದಿದ್ದಲ್ಲಿ, ವಿವಾದದ ಸ್ವರೂಪವನ್ನು ಮತ್ತು ಅದರಲ್ಲಿ ಒಳಗೊಂಡಿರುವ ಮೌಲ್ಯವನ್ನು ಪರಿಗಣನೆಗೆ ತೆಗೆದುಕೊಂಡು ಆಯೋಗವು ನಿರ್ದೇಶಿಸುವಂತೆ, ಆಯೋಗದಿಂದ ಗೊತ್ತುಪಡಿಸಲಾದ ಒಬ್ಬರೇ ಮಧ್ಯಸ್ಥಗಾರನಿಗೆ ಅಥವಾ ಮೂರು ಜನ ಮಧ್ಯಸ್ಥಗಾರರಿಗೆ ವಹಿಸಬಹುದು ಮತ್ತು 3 ಜನ ಮಧ್ಯಸ್ಥಗಾರರಿಗೆ ವಹಿಸಲು ತೀರ್ಮಾನಿಸಿದಲ್ಲಿ, ವಿವಾದದ ಪ್ರತಿಯೊಬ್ಬ ಪಕ್ಷಕಾರನು ಒಬ್ಬೊಬ್ಬರನ್ನು ಹಾಗೂ ಮೂರನೆಯವನ್ನು ಆಯೋಗವು ನಾಮ ನಿರ್ದೇಶನ ಮಾಡತಕ್ಕದ್ದು. ಪರಂತು, ಯಾರೇ ಪಕ್ಷಕಾರನು ಮಧ್ಯಸ್ಥಗಾರರನ್ನು ನಾಮನಿರ್ದೇಶನ ಮಾಡಲು ವಿಫಲನಾದಲ್ಲಿ ಅಥವಾ ಪಕ್ಷಕಾರರಿಂದ ಅಥವಾ ಆಯೋಗದಿಂದ ನಾಮನಿರ್ದೇಶನ ಮಾಡಲಾದ ಯಾವನೇ ಮಧ್ಯಸ್ಥಗಾರನು, ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ಅಥವಾ ಮುಂದುವರೆಯಲು ವಿಫಲನಾದಲ್ಲಿ ಅಥವಾ ನಿರ್ಲಕ್ಷ್ಯ ತೋರಿದಲ್ಲಿ, ಆತನ ಸ್ಥಾನದಲ್ಲಿ ಬೇರೆ ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಲು ಆಯೋಗವು ಹಕ್ಕುಳ್ಳದ್ದಾಗಿರತಕ್ಕದು.

2) ಮಧ್ಯಸ್ಥಗಾರನ ನಾಮನಿರ್ದೇಶನಕ್ಕೆ ಲೈಸೆನ್ಸುದಾರರು ಅಥವಾ ಮಧ್ಯಸ್ಥ ನಿರ್ಣಯದಲ್ಲಿನ ಇತರ ಸಂಬಂಧಿತ ವ್ಯಕ್ತಿಯು ಪಕ್ಷಪಾತ ಅಥವಾ ಅಂತಹುದೇ ಕಾರಣಗಳ ಆಧಾರದ ಮೇಲೆ ಯುಕ್ತ ಆಕ್ಷೇಪಣೆ ಹೊಂದಿದ್ದಲ್ಲಿ ಮತ್ತು ಆಕ್ಷೇಪಣೆಯು ಮಾನ್ಯವಾದುದು ಹಾಗೂ ನ್ಯಾಯೋಚಿತವಾದುದು ಎಂದು ಆಯೋಗವು ಪರಿಗಣಿಸಿದಲ್ಲಿ, ಅಂಥ ವ್ಯಕ್ತಿಯನ್ನು ಆಯೋಗವು ಮಧ್ಯಸ್ಥಗಾರನನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

27. **ನ್ಯಾಯನಿರ್ಣಾಯ, ಇತ್ಯರ್ಥ, ಐತೀರ್ಪು ಹೊರಡಿಸಲು ಕಾರ್ಯವಿಧಾನ.**– (1) ಆಯೋಗವೇ ಆಗಲೀ ಅಥವಾ ಅದು ನಾಮನಿರ್ದೇಶನ ಮಾಡಿದ ಯಾವುದೇ ಪ್ರಾಧಿಕಾರ : ಪ್ರಾಧಿಕಾರಗಳೇ ಆಗಲೀ, ಮಧ್ಯಸ್ಥ ನಿರ್ಣಯಕ್ಕೆ ಅನುಸರಿಸಬೇಕಾದ ಕಾರ್ಯವಿಧಾನವನ್ನೇ, ಸಾಧ್ಯವಾದಷ್ಟು ಮಟ್ಟಿಗೆ, ಸಾಮಾನ್ಯ ವಿನಿಯಮಗಳ ಅಧ್ಯಾಯ – 2ರಲ್ಲಿ ಹೇಳಿರುವಂತೆ ಆಯೋಗದ ಮುಂದೆ ಅಹವಾಲು ಹೇಳಿಕೆಗೂ ಅನ್ವಯವಾಗತಕ್ಕದು.

2) ಆಯೋಗವು ನಾಮನಿರ್ದೇಶನ ಮಾಡಿದ ಮಧ್ಯಸ್ಥಿಕೆಗಾರ(ರು), ಪಕ್ಷಕಾರರ ಅಹವಾಲು ಕೇಳಿದ ನಂತರ, ನ್ಯಾಯನಿರ್ಣಯಕ್ಕಾಗಿ ಉದ್ಭವಿಸಿರುವ ಎಲ್ಲಾ ಅಂಶಗಳ ಬಗ್ಗೆ ತೀರ್ಮಾನಿಸಲು ಕಾರಣಗಳನ್ನು ನೀಡಿ ಸ್ಪಷ್ಟವಾಗ ತೀರ್ಪನ್ನು ನೀಡತಕ್ಕದು ಮತ್ತು ಆಯೋಗವು ನಿರ್ದಿಷ್ಟಪಡಿಸುವಂಥ ವೇಳೆಯೊಳಗಾಗಿ ತೀರ್ಪನ್ನು ಆಯೋಗಕ್ಕೆ ಕಳುಹಿಸಿಕೊಡತಕ್ಕದು.

3) ಆಯೋಗವು, ತಾನು ನೇಮಿಸಿದ ಮಧ್ಯಸ್ಥಗಾರ ಅಥವಾ ಮಧ್ಯಸ್ಥಗಾರರು ನೀಡಿದ ತೀರ್ಪಿನ ಬಗ್ಗೆ ಸಂಬಂಧಿಸಿದ ಪಕ್ಷಕಾರರಿಗೆ ನೋಟೀಸು ನೀಡತಕ್ಕದು ಮತ್ತು ಆಯೋಗವು ನಿರ್ದೇಶಿಸುವಂಥ ಸಮಯದೊಳಗಾಗಿ ತೀರ್ಪಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಮತ್ತು ಆಕ್ಷೇಪಣೆಗಳಿಗೆ ಉತ್ತರವನ್ನು ಸಲ್ಲಿಸಲು ಪಕ್ಷಕಾರರಿಗೆ ಅವಕಾಶ ನೀಡತಕ್ಕದು.

4) ಪಕ್ಷಕಾರರಿಗೆ ಅಹವಾಲನ್ನು ಹೇಳಲು ಅವಕಾಶ ನೀಡಿದ ನಂತರ ತನಗೆ ಸೂಕ್ತವೆನಿಸುವಂತಹ ಸೂಕ್ತ ಆದೇಶಗಳನ್ನು ಹೊರಡಿಸಲು ಆಯೋಗವು ಹಕ್ಕುಳ್ಳದ್ದಾಗಿರತಕ್ಕದು.

28. ಮಧ್ಯಸ್ಥ ನಿರ್ಣಯ ಮತ್ತು ವ್ಯವಹರಣೆಗಳ ವೆಚ್ಚ.– ಆಯೋಗದ ಮುಂದಿರುವ ಮಧ್ಯಸ್ಥ ನಿರ್ಣಯದ ಮತ್ತು ವ್ಯವಹರಣೆಗಳ ವೆಚ್ಚವನ್ನು ಆಯೋಗವು ನಿರ್ದೇಶಿಸುವಂಥ ಪಕ್ಷಕಾರರು, ನಿರ್ದೇಶಿಸುವಂಥ ಮೊತ್ತಗಳಲ್ಲಿ ಭರಿಸತಕ್ಕದು.

## ಅಧ್ಯಾಯ – IV

### ಇತರೆ

29. ಲೈಸೆನ್ಸುದಾರರು ಕೆಲವೊಂದು ಕೆಲಸಗಳನ್ನು ಮಾಡುವಂತಿಲ್ಲ.

ಲೈಸೆನ್ಸುದಾರರು ಅಥವಾ ವಿದ್ಯುತ್ ಉತ್ಪಾದನಾ ಕಂಪನಿಯು ಉದ್ಯಮ ಅಥವಾ ಲೈಸೆನ್ಸನ್ನು ಹೊಂದುವ ಕುರಿತಾದ ನೋಟೀಸು.

1) ಆಯೋಗದಿಂದ ಪೂರ್ವಾನುಮೋದನೆಯನ್ನು ಪಡೆಯದ ಹೊರತು ಲೈಸೆನ್ಸುದಾರರು:

ಎ) ಯಾವುದೇ ಇತರ ಲೈಸೆನ್ಸುದಾರರ ಸಂಸ್ಥೆಯು ಯಾವುದೇ ಖರೀದಿ ಅಥವಾ ಸ್ವಾಧೀನ ಅಥವಾ ಇನ್ಯಾವುದೇ ವ್ಯವಹರಣೆಯನ್ನು ಕೈಗೆತ್ತಿಗೊಳ್ಳುವುದು; ಅಥವಾ

ಬಿ) ಇತರ ಯಾವುದೇ ಲೈಸೆನ್ಸುದಾರರ ಸಂಸ್ಥೆಯೊಂದಿಗೆ ತನ್ನ ಸಂಸ್ಥೆಯ ವಿಲೀನ. ಪರಂತು, ಕಂಡಿಕೆ(ಎ) ಅಥವಾ ಕಂಡಿಕೆ(ಬಿ) ಯಲ್ಲಿರುವ ಉಲ್ಲೇಖಿತವಾಗಿರುವ ಸಂಸ್ಥೆಯ ಲೈಸೆನ್ಸುದಾರನು ರಾಜ್ಯಕ್ಕೆ ಹೊರತಾದ ಒಂದು ರಾಷ್ಟ್ರದಲ್ಲಿದ್ದರೆ ಈ ಕಂಡಿಕೆಯಲ್ಲಿ ಒಳಗೊಂಡಿರುವುದಕ್ಕೆ ಅನ್ವಯಿಸತಕ್ಕದ್ದಲ್ಲ.

2) ಪ್ರತಿ ಲೈಸೆನ್ಸುದಾರರು, ಮೇಲಿನ ಕಂಡಿಕೆ (1)ರಂತೆ ಪೂರ್ವಾನುಮೋದನೆ ಪಡೆಯುವುದಕ್ಕೆ ಮುಂಚಿತವಾಗಿ, ಅಂತಹ ಅನುಮೋದನೆಗಾಗಿ ಅರ್ಜಿ ಸಲ್ಲಿಸುವ ಅಂತಹ ಲೈಸೆನ್ಸುದಾರನ ಪ್ರದೇಶದಲ್ಲಿ ವಿದ್ಯುಚ್ಛಕ್ತಿ ಪ್ರಸರಣ ಅಥವಾ ವಿತರಣೆ ಮಾಡುವ ಇತರ ಪ್ರತಿ ಲೈಸೆನ್ಸುದಾರರಿಗೆ ಒಂದು ತಿಂಗಳಿಗಿಂತ ಕಡಿಮೆಯಿಲ್ಲದಂತೆ ನೋಟೀಸ್ ನೀಡಬೇಕು.

3) ಲೈಸೆನ್ಸುದಾರನು, ಆಯೋಗದಿಂದ ಪೂರ್ವಾನುಮೋದನೆಯನ್ನು ಪಡೆಯದ ಹೊರತು ಯಾವುದೇ ವೇಳೆಯಲ್ಲಿ ತನ್ನ ಲೈಸೆನ್ಸಿಗೆ ವಹಿಸುವುದು ಅಥವಾ ತನ್ನ ಸಂಸ್ಥೆಯ ವರ್ಗಾವಣೆ ಅಥವಾ ಯಾವುದೇ ಅದರ ಭಾಗವನ್ನು ಮಾರಾಟ ಗುತ್ತಿಗೆ, ವಿನಿಯಮ ಅಥವಾ ಬೇರಾವುದನ್ನು ಮಾಡತಕ್ಕದ್ದಲ್ಲ.

4) ಆಯೋಗದ ಪೂರ್ವಾನುಮೋದನ ಪಡೆಯದ ಹೊರತು, ಮೇಲಿನ ಕಂಡಿಕೆ(1) ಅಥವಾ ಕಂಡಿಕೆ (3)ರಲ್ಲಿ ನಿಗದಿಪಡಿಸಿದ ಯಾವುದೇ ವ್ಯವಹರಣೆಗೆ ಸಂಬಂಧಿಸಿದ ಯಾವುದೇ ಒಪ್ಪಂದ ಅನೂರ್ಜಿತವಾಗತಕ್ಕದ್ದು.

5) ಈ ಮೇಲಿನ ಕಂಡಿಕೆ(1) ಅಥವಾ (3)ರ ನಿಬಂಧನೆಗಳಂತೆ ಅನುಮೋದನೆ ಪಡೆಯದ ಉದ್ದೇಶಕ್ಕಾಗಿ, ಆಯೋಗವು, ಉದ್ದೇಶಿತ ಅರ್ಜನೆಯು ಸಂಬಂಧಿಸಿದ ಪ್ರದೇಶದಲ್ಲಿ ಪ್ರಸಾರದಲ್ಲಿರುವ ಎರಡು ಇಂಗ್ಲೀಷ್ ಮತ್ತು ಎರಡು ಕನ್ನಡ ದಿನಪತ್ರಿಕೆಗಳಲ್ಲಿ ಆತನ ಅರ್ಜಿಯ ಸಂಕ್ಷಿಪ್ತ ವಿವರಗಳನ್ನು ಮೊದಲು ಪ್ರಕಟಿಸುವಂತೆ ಅರ್ಜಿದಾರನನ್ನು ಅಗತ್ಯಪಡಿಸತಕ್ಕದು. ಆಯೋಗವು, ಕೋರಿಕೆಗೆ

ಸಮ್ಮತಿ ನೀಡುವ ಅಥವಾ ನಿರಾಕರಿಸುವ ಮೊದಲು ನೋಟೀಸು ಪ್ರಕಟವಾದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಸ್ವೀಕರಿಸುವ ಎಲ್ಲಾ ಆಕ್ಷೇಪಣೆಗಳನ್ನು ಪರಿಗಣಿಸುವುದು.

6) ಈ ಮೇಲಿನ ವಿನಿಯಮ 30(5)ರಂತೆ ವ್ಯವಹರಣೆಗಳಿಗೆ ಸಾಧ್ಯವಾದಷ್ಟು ವ್ಯವಹಾರಿಕವಾಗಿ ಸಾಮಾನ್ಯ ವಿನಿಯಮಗಳ ವ್ಯವಹರಣೆಗಳನ್ನು ಅನ್ವಯಿಸತಕ್ಕದ್ದು.

30. ದಂಡಗಳು ಮತ್ತು ಶುಲ್ಕಗಳು : ಅಧಿನಿಯಮದ ಯಾವುದೇ ಉಪಬಂಧವನ್ನು, ಅದರ ಮೇರೆಗೆ ರಚಿಸಲಾದ ನಿಯಮಗಳನ್ನು, ಈ ವಿನಿಯಮಗಳು ಅಥವಾ ಈ ವಿನಿಯಮಗಳ ಮೇರೆಗೆ ಆಯೋಗವು ಹೊರಡಿಸಬಹುದಾದ ಯಾವುದೇ ಆದೇಶವನ್ನು, ಆಜ್ಞೆಯನ್ನು, ಷರತ್ತನ್ನು ಅಥವಾ ಇತರ ನಿರ್ದೇಶನವನ್ನು ಲೈಸನ್ಸುದಾರನು ಅಥವಾ ಇತರ ಯಾರೇ ವ್ಯಕ್ತಿಯು ಯಾವುದೇ ಕೃತ್ಯ ಅಥವಾ ಲೋಪದ ಮೂಲಕ ಉಲ್ಲಂಘಿಸಿದರೆ, ಆಯೋಗವು ಸಹಜ ನ್ಯಾಯ ತತ್ವಗಳನ್ನು ಪಾಲಿಸಿದ ನಂತರ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸುವಂಥ ದಂಡಗಳು ಅಥವಾ ಶುಲ್ಕಗಳನ್ನು ವಿಧಿಸಬಹುದು.

ಪರಂತು, ಅಂಥ ದಂಡವು ಅಥವಾ ಶುಲ್ಕವು ಪ್ರತಿಯೊಂದು ಸಂದರ್ಭದಲ್ಲಿ ಅಂಥ ಹಾಗೇ ಪಾಲಿಸದಿರುವುದರಿಂದ ಅಥವಾ ಅಂಥ ಉಲ್ಲಂಘನೆಯಿಂದ ಉಂಟಾದ ನಷ್ಟ ಅಥವಾ ಇತರ ಹಾನಿಗೆ ಅನುಗುಣವಾಗಿರತಕ್ಕದು.

31. ಆಯೋಗದ ಅಂತರ್ನಿಹಿತ ಅಧಿಕಾರವನ್ನು ಉಳಿಸುವಿಕೆ.– (1) ಈ ವಿನಿಯಮಗಳಲ್ಲಿ ಇರುವ ಯಾವುದೂ, ನ್ಯಾಯೋದ್ದೇಶದ ದೃಷ್ಟಿಯಿಂದ ಅಥವಾ ಆಯೋಗದ ಪ್ರಕ್ರಿಯೆಯನ್ನು ನಿಂದಿಸುವುದನ್ನು ತಡೆಗಟ್ಟಲು ಅವಶ್ಯವಿರುವಂತಹ ಆದೇಶಗಳನ್ನು ಮಾಡಲು ಆಯೋಗಕ್ಕೆ ಇರುವ ಅಂತರ್ನಿಹಿತ ಅಧಿಕಾರವನ್ನು ಸೀಮಿತಗೊಳಿಸತಕ್ಕದೆಂದು ಅಥವಾ ಬೇರೆ ರೀತಿ ಬಾಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

2) ಈ ವಿನಿಯಮಗಳಲ್ಲಿ ಇರುವ ಯಾವುದೂ, ವಿಷಯದ ಅಥವಾ ವಿಷಯಗಳ ವರ್ಗದ ವಿಶೇಷ ಸಂದರ್ಭಗಳ ದೃಷ್ಟಿಯಿಂದ ಹಾಗೂ ಲಿಖಿತದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಆಯೋಗವು ಅಂಥ ವಿಷಯ ಅಥವಾ ವಿಷಯಗಳ ವರ್ಗದ ಬಗ್ಗೆ ವ್ಯವಹರಿಸಲು ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಈ ವಿನಿಯಮಗಳ ಯಾವುದೇ ಉಪಬಂಧಗಳಿಗಿಂತ ಭಿನ್ನವಾಗಿರುವ ಒಂದು ವಿಧಾನವನ್ನು ಅಳವಡಿಸಿಕೊಳ್ಳುವುದು ಅವಶ್ಯಕ ಅಥವಾ ಯುಕ್ತವೆಂದು ಆಯೋಗವು ಭಾವಿಸಿದರೆ ಅದನ್ನು ಅಳವಡಿಸಿಕೊಳ್ಳುವುದಕ್ಕೆ ಆಯೋಗವನ್ನು ನಿಷೇಧಿಸತಕ್ಕದ್ದಲ್ಲ.

3) ಈ ವಿನಿಯಮಗಳಲ್ಲಿ ಇರುವ ಯಾವುದೂ, ಯಾವುದಕ್ಕೆ ವಿನಿಯಮಗಳನ್ನು ರಚಿಸಿಲ್ಲವೋ, ಆ ವಿಷಯಗಳ ಬಗ್ಗೆ ವ್ಯವಹರಿಸಲು ಅಥವಾ ಅಧಿನಿಯಮದ ಅಡಿಯಲ್ಲಿ ಯಾವುದೇ ಅಧಿಕಾರಗಳನ್ನು ಚಲಾಯಿಸಲು, ವ್ಯಕ್ತವಾಗಿಯಾಗಲೀ ಅಥವಾ ಅವ್ಯಕ್ತವಾಗಿಯಾಗಲೀ ಆಯೋಗವನ್ನು ನಿಷೇಧಿಸತಕ್ಕದ್ದಲ್ಲ ಮತ್ತು ಆಯೋಗವು ಅಂಥ ವಿಷಯಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ತನಗೆ ಸೂಕ್ತವೆನಿಸಿದ ರೀತಿಯಲ್ಲಿ ವ್ಯವಹರಿಸಬಹುದು.

32. ತೊಡಕುಗಳ ನಿವಾರಣೆಗೆ ಇರುವ ಅಧಿಕಾರ.– ಈ ವಿನಿಯಮಗಳಲ್ಲಿ ಇರುವ ಯಾವುದೇ ಉಪಬಂಧವನ್ನು ಜಾರಿಗೆ ತರುವಾಗ ಯಾವುದೇ ತೊಡಕು ಉಂಟಾದರೆ, ಆಯೋಗವು ಒಂದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತೊಡಕುಗಳ ನಿವಾರಣೆಯ ಉದ್ದೇಶಕ್ಕೆ ಅವಶ್ಯಕ ಅಥವಾ ಹಿತವೆಂದು ಅದಕ್ಕೆ ಕಂಡುಬರುವ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂತೆ, ಏನನ್ನಾದರೂ ಮಾಡಬಹುದಾಗಿದೆ.

33. ವಿನಿಯಮಗಳ ಅಗತ್ಯತೆಯಿಂದ ವಿನಾಯಿತಿಗೊಳಿಸುವ ಅಧಿಕಾರ.– ಆಯೋಗವು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಮತ್ತು ಬಾಧಿತ ಪಕ್ಷಕಾರರಿಗೆ ನೋಟೀಸು ನೀಡುವ ಮೂಲಕ, ನಿರ್ದಿಷ್ಟಪಡಿಸಲಾಗುವಂಥ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ನಿರ್ದಿಷ್ಟ ವಿಷಯಗಳಲ್ಲಿ, ವಿನಿಯಮದ ಯಾವುದೇ ಅಗತ್ಯತೆ ಬಗ್ಗೆ ವಿನಾಯಿತಿ ನೀಡಲು ಅಧಿಕಾರವನ್ನು ಹೊಂದಿರತಕ್ಕದು.

34. ಗೊತ್ತುಪಡಿಸಲಾದ ಅವಧಿಯ ವಿಸ್ತರಣೆ ಅಥವಾ ಮೊಟಕು ಮಾಡುವುದು.– ಅಧಿನಿಯಮದ ಉಪಬಂಧಗಳಿಗೊಳಪಟ್ಟು ಈ ವಿನಿಯಮಗಳ ಮೇರೆಗೆ ಅಥವಾ ಆಯೋಗದ ಆದೇಶದ ಮೇರೆಗೆ ಯಾವುದೇ ಕಾರ್ಯವನ್ನು ಮಾಡಲು ಗೊತ್ತುಪಡಿಸಲಾದ ಅವಧಿಯನ್ನು ಸಾಕಷ್ಟು ಕಾರಣಗಳಿಗಾಗಿ ಆಯೋಗವು ಆದೇಶದ ಮೂಲಕ ವಿಸ್ತರಿಸಬಹುದು. (ಅದು ಈಗಾಗಲೇ ಕೊನೆಗೊಂಡಿರಲಿ ಅಥವಾ ಇಲ್ಲದಿರಲಿ) ಅಥವಾ ಮೊಟಕುಗೊಳಿಸಬಹುದು.

35. ಪಾಲಿಸದಿರುವಿಕೆಯ ಪರಿಣಾಮ.– ಈ ವಿನಿಯಮಗಳ ಯಾವುದೇ ಅವಶ್ಯಕತೆಯನ್ನು ಪಾಲಿಸಲು ತಪ್ಪುವುದು, ಹಾಗೇ ತಪ್ಪುವುದರಿಂದ ನ್ಯಾಯೋದ್ದೇಶವು ವಿಫಲವಾಗಿದೆಯೆಂದು ಆಯೋಗವು ಅಭಿಪ್ರಾಯಪಟ್ಟ ಹೊರತು, ಹಾಗೇ ತಪ್ಪಿರುವ ಕಾರಣ ಮಾತ್ರದಿಂದಲೇ ಆಯೋಗದ ಯಾವುದೇ ವ್ಯವಹರಣೆಗಳು ಅನೂರ್ಜಿತವಾಗತಕ್ಕದ್ದಲ್ಲ.

36. **ಆಯೋಗವು ಹೊರಡಿಸಿದ ಆದೇಶಗಳ ಜಾರಿ.**– ಅಧಿನಿಯಮದ ಮತ್ತು ವಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಆಯೋಗವು ಹೊರಡಿಸಿದ ಆದೇಶಗಳ ಜಾರಿ ಮತ್ತು ಪಾಲನೆಯನ್ನು ಕಾರ್ಯದರ್ಶಿಯವರು ಖಚಿತಪಡಿಸಿಕೊಳ್ಳತಕ್ಕದು ಮತ್ತು ಅವಶ್ಯವಿದ್ದರೆ ನಿರ್ದೇಶನಗಳ ಬಗ್ಗೆ ಆಯೋಗದ ಆದೇಶಗಳನ್ನು ಕೋರಬಹುದು.

ಆಯೋಗದ ಆದೇಶದ ಮೇರೆಗೆ,

ಕಾರ್ಯದರ್ಶಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಮೂನೆ – 1

# ಲೈಸೆನ್ಸ್ ಮಂಜೂರಾತಿಗಾಗಿ ಅರ್ಜಿ ನಮೂನೆ

(ವಿನಿಯಮ 4(3) ಅನ್ನು ನೋಡಿ)

| ಕ್ರಮ ಸಂಖ್ಯೆ | ವಿವರಗಳು | |
|---|---|---|
| 1 | ಅರ್ಜಿದಾರನ ಹೆಸರು ಮತ್ತು ವಿಳಾಸ | |
| 2 | ಲೈಸೆನ್ಸ್‌ಗಾಗಿ ಸಲ್ಲಿಸಿದ ಅರ್ಜಿಯ ಸ್ವರೂಪ ವಿದ್ಯುಚ್ಛಕ್ತಿಯ ಪ್ರಸರಣ/ವಿತರಣ/ಮಾರಾಟ | |
| 3 | ಸರಬರಾಜು/ಪ್ರಸರಣ/ಮಾರಾಟಕ್ಕಾಗಿ ಕೋರಿರುವ ಲೈಸೆನ್ಸನ ಪ್ರದೇಶ : ವಿವರಗಳೊಂದಿಗೆ ಭೂಪಟ ಲಗತ್ತಿಸಿ. | |
| 4 | ಲೈಸೆನ್ಸಿನಂತೆ ಉದ್ದೇಶಿತ ಸರಬರಾಜು ಮಾಡಲಿರುವ ವ್ಯಕ್ತಿಗಳು :<br>(ದಯಮಾಡಿ ಲೈಸೆನ್ಸುದಾರ ವಿವರಗಳು/ವೋಲ್ಟೇಜು ವಿವರಗಳು ಇತ್ಯಾದಿಗಳೊಂದಿಗೆ ಲೈಸೆನ್ಸಿನಂತೆ ಉದ್ದೇಶಿತ ವಿದ್ಯುತ್ ಸರಬರಾಜು ಮಾಡಲಿರುವ ಗ್ರಾಹಕರ ವಿವರಗಳನ್ನು ನೀಡಿ)<br>(ಅಗತ್ಯವಿದ್ದರೆ, ದಯಮಾಡಿ ಹೆಚ್ಚುವರಿ ಹಾಳೆ ಲಗತ್ತಿಸಿ) | |
| 5 | ಅರ್ಜಿದಾರನ ಮಾಲೀಕತ್ವದ ವಿವರಗಳು :<br>ವ್ಯಕ್ತಿ/ಸಂಸ್ಥೆ/ಸಹಕಾರಿ/ಕಂಪನಿ/ಇತರ | |
| 6 | ಅರ್ಜಿ ನೋಂದಣಿ/ಸೇರ್ಪಡೆ ವಿವರಗಳು :<br>(i) ನೋಂದಣಿ ದಿನಾಂಕ<br>(ii) ನೋಂದಣಿ ಸಂಖ್ಯೆ<br>(iii) ಯಾವ ಅಧಿನಿಯಮದಂತೆ ನೋಂದಣಿಯಾಗಿದೆ. | |
| 7 | ನಿರ್ದೇಶಕರ ಹೆಸರು ಮತ್ತು ವಿಳಾಸ (ಪಟ್ಟಿ ಲಗತ್ತಿಸಿ) | |
| 8 | ಅರ್ಜಿದಾರನ ಪ್ರಸಕ್ತದ ಪ್ರಮುಖ ವ್ಯವಹಾರ | |
| 9 | ನಿರ್ವಹಣೆಯ ಅನುಭವ ಮತ್ತು ಸಾಮರ್ಥ್ಯ<br>(ದಯಮಾಡಿ ಬೆಂಬಲಿತವಾಗಿ ವಿವರಗಳನ್ನು ಒದಗಿಸಿ) | |
| 10 | ಅರ್ಜಿದಾರನ ನಿವ್ವಳ ಬಂಡವಾಳ (ಮೀಸಲಿನೊಂದಿಗೆ ಒಟ್ಟು ಈಕ್ವಿಟಿ)<br>(ಕ್ಲೇಮಿನ ಬೆಂಬಲಿತವಾಗಿ ಹಿಂದಿನ ವರ್ಷಗಳ ಪರಿಶೋಧಿತ ಲೆಕ್ಕಗಳು/ಪತ್ರಗಳನ್ನು ದಯಮಾಡಿ ಒದಗಿಸಿ) | |
| 11 | ಮುಂದಿನ ಮೂರು ವರ್ಷಗಳಲ್ಲಿ ಲೈಸೆನ್ಸಿನಂತೆ ನಿರ್ವಹಿಸಲಿರುವ ಉದ್ದೇಶಿತ ವಿದ್ಯುಚ್ಛಕ್ತಿಯ ಮೂಲಗಳು ಮತ್ತು ಪ್ರಮಾಣ.<br>(ದಯಮಾಡಿ ಮೂಲಗಳ ವಿವರಗಳನ್ನು ಲಗತ್ತಿಸಿ) | |

| | | |
|---|---|---|
| 12 | ಉದ್ದೇಶಿತ ಲೈಸೆನ್ಸಿನಂತೆ ನಿರ್ವಹಣೆಯ ಉದ್ದೇಶಕ್ಕಾಗಿ ಆರ್ಥಿಕ ವ್ಯವಸ್ಥೆಯ ವಿವರಗಳು :<br>(ಮುಂದಿನ ಮೂರು ವರ್ಷಗಳಿಗಾಗಿ ಹಣ ಹರಿವಿನ ಪಟ್ಟಿಯನ್ನು ಲಗತ್ತಿಸಿ) | |
| 13 | ಲೈಸೆನ್ಸ್ ಅರ್ಜಿಯ ಫೀಜು ತುಂಬಿದ ವಿವರಗಳು<br>(i) ಫೀಜಿನ ಮೊತ<br>(ii) ಡಿಡಿ ಸಂಖ್ಯೆ/ದಿನಾಂಕ<br>(iii) ಯಾವ ಬ್ಯಾಂಕಿನಿಂದ ಪಡೆಯಲಾಗಿದೆ. | |
| 14 | ಯಾವುದಾದರೂ ಇತರೆ ವಿವರಗಳು | |
| 15 | ಲಗತ್ತಿಸಿರುವ ದಸ್ತಾವೇಜುಗಳ ಪಟ್ಟಿ (ವಿನಿಯಮ 4(4) ನೋಡಿ) | |

ಈ ಮೇಲೆ ಒದಗಿಸಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿವೆ ಹಾಗೂ ಅದರಲ್ಲಿ ಯಾವುದೇ ಭಾಗವು ಅಸತ್ಯದಿಂದ ಕೂಡಿಲ್ಲ ಮತ್ತು ಅದರಿಂದ ಯಾವುದೇ ಮಾಹಿತಿಯನ್ನು ಬಚ್ಚಿಟ್ಟಿಲ್ಲ ಎಂದು ಪ್ರಮಾಣೀಕರಿಸಿದ್ದೇನೆ.

ಸಹಿ

ಹೆಸರು ಮತ್ತು ವಿಳಾಸದೊಂದಿಗೆ

ಕಛೇರಿ ಮುದ್ರೆ

ಸ್ಥಳ :

ದಿನಾಂಕ :

KERC (Licensing) Regulations, 2004